ಕಲ್ಯಾಣ ಕಿರಣ

ಜುಲೈ-2011 ಬೆಲೆ ರೂ.10/-



ವಿಶ್ವಗುರು ಬಸವಣ್ಣನವರು

1134-1196





॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-06	ಜೂನ್-ಜುಲೈ 2011	ವಾರ್ಷಿಕ ಚಂದಾ 100 ರೂ.

ಮಂಗಳಾಂಗ ಗುರು ಲಿಂಗಾನಂದರು

ಮಂಗಳಾಂಗ ಗುರು ಲಿಂಗಾನಂದರೆ, ಮಾಯವಾದಿರೆಲ್ಲಿ?
ವಿಶ್ವಚೇತನವೆ ಲೀನವಾದಿರಾ, ಲಿಂಗದೇವನಲ್ಲಿ।
ವಿಶ್ವಧರ್ಮದ ವಿಸ್ತಾರ ತಿಳಿಸಿ, ಮಾನವೀಯತೆಗೆ ಮಹತ್ವ ಕೊಡಿಸಿ
ಬಸವ ಧರ್ಮದ ಪ್ರಣತೆಯುರಿಗೆ, ತವ ತಪದ ತೈಲ ಸುರಿಸಿ ॥ 1 ॥

ಸತ್ಯ ಶರಣ ಸಂದೇಶವನ್ನು, ಈ ಜಗದಿ ಬಿತ್ತಿ ಬೆಳೆಸಿ
ಉತ್ತುಂಗಕ್ಕೇರಿಸಿದೆ ಬಸವ ಧರ್ಮ ಕಳೆಕಿತ್ತು ಹಸನುಗೊಳಿಸಿ
ಜಂಗಮತ್ತ್ವವನು ಅಂಗವಿಸಿ ಲಿಂಗದ ನಿಜವ ತಿಳಿಸಿ
ಲಿಂಗಾಂಗ ಸಮರಸದ ಸಿಹಿಜೇನು ಬಡಭಕ್ತ ಜನಕೆ ಉಣಿಸಿ ॥ 2 ॥

ಬಸವನುಸಿರು ಜಗದೊಳಗೆ ಹರಿಸಿ ಜನರ ಜಾಗೃತಿಗೊಳಿಸಿ
ಹರಿದು ಹಂಚಿದ ಧರ್ಮ ಶಕ್ತಿಯ ಹೊಸೆದು ಹುರಿಗೊಳಿಸಿ
ಬಸವಣ್ಣರೈಕ್ಯ ಕೂಡಲಸಂಗಮದ ಧರ್ಮಕ್ಷೇತ್ರದಲ್ಲಿ
ಒಂದುಗೂಡಿಸಿದೆ ಬಸವ ಭಕ್ತರನು ಶರಣ ಮೇಳದಲ್ಲಿ ॥ 3 ॥

ಬಸವ ಸಂದೇಶಕೆ ಚ್ಯುತಿಯ ತರುವ ಮಠಗಳಿಗೆ ದಿಟದಿ ನುಡಿದೆ
ಜಾತಿನಂಬಿಕೆಯ ಭೂತಬಿಡಿಸಿ ನಿಜ ನೀತಿ ಜ್ಯೋತಿಯಾದೆ।
ಸ್ತುತಿನಿಂದೆ ಏನೆಂದೂ ಬರಲಿ ನೆಲೆಸಿತ್ತು ನಗೆಯ ಮೊಗದಿ
ಧರ್ಮದ ಮಮತೆ ಎದೆ ತುಂಬ ಇತ್ತು ಅದನಾವಬಲ್ಲ ಜಗದಿ? ॥ 4 ॥

ನಡೆನುಡಿಗಳಲ್ಲಿ ಹುದುಗಿತ್ತು ಸರ್ವಧರ್ಮ ಸಮತೆ ಪ್ರೀತಿ
ಹೃದಯಾಂತರಾಳದಲ್ಲಿ ಮಿಡಿಯುತ್ತಿತ್ತು ಜಗಕೆ ಬಯಸಿ ಶಾಂತಿ ।
ಅಂದು ಬಂದ ಹಿರಿಯೂರಿನಿಂದ ಬರಸಿಡಿಲಿನಂಥ ಸುದ್ದಿ
ಕೇಳಿದೊಡನೆ ಒಗೆದಂತೆ ಆಯ್ತು ಕುದಿ ಸುಣ್ಣದೊಳಗೆ ಎದ್ದಿ ॥ 5 ॥

ಇನ್ನೆಲ್ಲಿ ದೊರೆಯಬಹುದಯ್ಯಾ ನಿಮ್ಮ ಆ ದಿವ್ಯ ಮೊಗದ ಕಾಂತಿ?
ಇನ್ನಾರು ತಿಳಿಸಬಹುದಯ್ಯಾ ಗುರುವೆ, ನಿರ್ಭಯದ ಧರ್ಮ ಕ್ರಾಂತಿ?!
ಗುರುವೆ ಬಾರೋ ಜಗದೊರವೆ ಬಾರೊ ನಾ ಕರೆವೆ ಕೈಯ ಮಾಡಿ
ಬಸವಳಿದು ನಿಂತ ಈ ಬಸವ ದಳದ ಭಕ್ತರಿಗೆ ವರವ ನೀಡಿ ॥ 6 ॥

- ಶರಣ.ಮಹಾದೇವ ಗುಡೇರ
ಜೆ.ಎಸ್.ಎಸ್.ಕಾಲೇಜ್, ಗೋಕಾಕ್

★ಕಲ್ಯಾಣ ಕಿರಣ★

ಕಿರಣಗನ್ನಡಿ

ಪೂಜ್ಯ ಮಾತಾಜಿಯವರ
ಆತ್ಮೀಯ ಭಕ್ತರಲ್ಲಿ ಕಳಕಳಿಯ ಮನವಿ

ಆತ್ಮೀಯ ಶರಣ ಬಂಧುಗಳೆ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಲಿಂಗಾಯತ ಧರ್ಮ ಮತ್ತು ಸಮಾಜದ ಒಂದು ಶಕ್ತಿಯಾಗಿದ್ದಾರೆ. ಅವರಿಂದ ಸಮಾಜಕ್ಕೆ ಮತ್ತು ಬಸವ ಧರ್ಮಕ್ಕೆ ಹೆಚ್ಚಿನ ಸೇವೆ ಆಗಬೇಕಾಗಿದೆ. ಕಾರಣ ಅವರ ಅಮೂಲ್ಯವಾದ ಸಮಯವನ್ನು ಕೇವಲ ಗೃಹಪ್ರವೇಶ, ಮದುವೆ, ನಾಮಕರಣ ಮುಂತಾದ ಕಾರ್ಯಕ್ರಮಗಳಿಗೆ ಬಳಸದೆ ಧರ್ಮಕ್ಕಾಗಿ ವಿನಿಯೋಗಿಸಬೇಕಾಗಿದೆ. ಕಾರಣ ಭಕ್ತರು ಪೂಜ್ಯ ಮಾತಾಜಿಯವರು ಇದ್ದ ಸ್ಥಳಕ್ಕೆ ಬಂದು ದರ್ಶನ, ಆಶೀರ್ವಾದ ಪಡೆದುಕೊಳ್ಳಬೇಕಾಗಿ ವಿನಂತಿ.


– ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
07620342899, 09212627150

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 8970898205, 7760627640, 8892912123

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
816ನೆಯ ಲಿಂಗೈಕ್ಯ ಸಂಸ್ಮರಣೆ



ಪ್ರಭು (ಗುರು) ವಾರ ದಿ. 04-08-2011 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ
ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ (ಟೌನ್ ಹಾಲ್)
ಪುರಭವನದಲ್ಲಿ

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

****

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 816ನೆಯ ಲಿಂಗೈಕ್ಯ ದಿನಾಚರಣ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ.ಚೆಟ್ಟಿ ಪುರಭವನ,ಬೆಂಗಳೂರು,

ದಿ.4-8-2011, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪೂರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 816ನೆಯ ಲಿಂಗೈಕ್ಯ ದಿನವು ಗುರು (ಪ್ರಭು) ವಾರ ದಿ.4-8-2011ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು. ಅವರ 816ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಕೆ.ಸಿ.ಜನರಲ್ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ದಿ.05-8-2011ರಂದು ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ) ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

****

ದಿ. 04ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 816ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3-30 ರಿಂದ 6-30

ನೀಲಾಂಬಿಕಾ ಷಷ್ಠಿ - ದಿ.05-8-2011ರಂದು ರಾಜಾಜಿ ನಗರದ ಬಸವ ಮಂಟಪದಲ್ಲಿ

ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿಸು ಸುಖದಿ
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣೆಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 05-8-2011ರಂದು 816ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದ ರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ-ಧನಗಳನ್ನು ಮಾತ್ರವಲ್ಲದೆ ಅಭಿಮಾನ -ಸಮಯ-ಪ್ರಾಣಗಳನ್ನು ಮೀಸಲಿಡಬೇಕು. ಬಸವ ಪಂಚಮಿ ಗುರುವಾರ ಬಂದಿದ್ದು ರಜಾದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ

ಮೆಜೆಸ್ಟಿಕ್‌ನಿಂದ 251,80ಎ, 265, 80ಇ ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

****

- ಮಾತಾಜಿ

ಭಾಗ -33

ಬಸವ ವಚನಾಮೃತ

575.ದ್ವಂದ್ವ ನಡೆ.

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಲಿಂಗದೇವಯ್ಯಾ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟ ಗೋಮಾಂಸವ ತಿಂಬರೆಂಬುದಕ್ಕೆ ಇದೆ ದೃಷ್ಟ.

-ಬ.ವ.ದೀ. 573

"ಎಂಥಾ ವಿಪರ್ಯಾಸ ! ವಿಪ್ರರು ತಾವು ನುಡಿದಂತೆ ನಡೆಯರು. ತಾವು ಹೇಳುವ ಶಾಸ್ತ್ರದ ವಿವರವೇ ಬೇರೆ, ನಡೆಯುವುದೇ ಬೇರೆ ಎಂದು ಗುರು ಬಸವಣ್ಣನವರು ವಿಷಾದದಿಂದ ನುಡಿಯುತ್ತಾರೆ. ಏಕಂ ಸತ್, ಈಶಾವಾಸ್ಯಮಿದಂ ಸರ್ವಂ ಎಂದು ಹೇಳಿ ಸರ್ವವ್ಯಾಪಿಯಾದ ದೇವನು ಒಬ್ಬನೇ ಎಂದು ಶಾಸ್ತ್ರವಾಕ್ಯ ಹೇಳುತ್ತಾರೆ, ಹಲವಾರು ದೇವತೆಗಳನ್ನು ಪೂಜಿಸುತ್ತಾರೆ. ಪಂಡಿತನಾದವನು ಆನೆ, ಹಸು, ಶುನಕ,ಚಂಡಾಲ ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುತ್ತಾನೆ ಎಂದು ಶಾಸ್ತ್ರವಾಕ್ಯವನ್ನು ಹೇಳುತ್ತಾರೆ. ಆಚರಣೆಯಲ್ಲಿ ಮೇಲುಕೀಳೆಂದು ವಿಭಜಿಸುತ್ತಾರೆ. ನಾನು ಯಾರ ಬಾಯಲ್ಲೋ ಕೇಳಿದ್ದೇನೆ, "ಆಷಾಡ ಮಾಸದಲ್ಲಿ ಮದುವೆ ನಿಷಿದ್ಧವೆಂದು ಜ್ಯೋತಿಷಿಗಳು ಹೇಳುತ್ತಾರೆ. ಬ್ರಾಹ್ಮಣರಿಗೆ ಮಾತ್ರ ಆಷಾಢದಲ್ಲಿ ಮದುವೆ ಮುಹೂರ್ತ ವಿರುತ್ತದೆ ಎನ್ನುತ್ತಾರೆ. ಇದರ ಉದ್ದೇಶ ಪೌರೋಹಿತ್ಯ ಕೈ ತಪ್ಪಬಾರದೆಂಬುದು." ಎಂದು ಶಾಸ್ತ್ರ ವಾಕ್ಯವನ್ನು ತಾವು ಪರಿಪಾಲಿಸುವುದಿಲ್ಲ.

ಮುಂದಿನ ಎರಡು ವಾಕ್ಯಗಳು ಅರ್ಥವಾಗುವುದಿಲ್ಲ. ಒಬ್ಬರು ಅದಕ್ಕೆ ಹೀಗೆ ಹೇಳಿದರು. "ಕೆಲವು ಬ್ರಾಹ್ಮಣರಿಗೆ ಗೋ ಮಾಂಸ ತಿನ್ನಲು ಆಸೆಯಾಯಿತಂತೆ. ಗೋ ಹತ್ಯೆ, ಗೋ ಮಾಂಸ ಭಕ್ಷಣೆ ಅವರಿಗೆ ನಿಷಿದ್ಧ. ಆಗ ಅವರು ಹೊಲೆಯರ ಮನೆಗೆ ಹೋಗಿ, "ನಿಮ್ಮ ಮಕ್ಕಳೆಂದು ಭಾವಿಸಿ ಗೋಮಾಂಸದ ಅಡಿಗೆ ನೀಡಿರಿ ಎಂದು ಬೇಡಿಕೊಂಡು ಉಂಡ ನಂತರ ಗೋಮೂತ್ರ, ಗೋಮಯದಿಂದ ಶುದ್ಧೀಕರಿಸಿಕೊಂಡು, ನಾಲಿಗೆಯನ್ನು ಕಾಯ್ದಸೂಜಿಯಿಂದ ಸುಡಿಸಿಕೊಂಡು ಪುನಃ ಬ್ರಾಹ್ಮಣ ಸಮಾಜವನ್ನು ಸೇರಿದರು." ಈ ವಿವರಣೆ ಎಷ್ಟರ ಮಟ್ಟಿಗೆ ಸರಿಯೋ ತಿಳಿಯದು. ಅಂತೂ ಈ ವಾಕ್ಯದ್ವಯಗಳಿಗೆ ಸಂಬಂಧಿಸಿ ಏನೋ ಕಥೆ ಇರುವಂತೆ ತೋರುತ್ತದೆ.

576. ಶರಣರು ಕರ್ಮವಿರಹಿತರು

ಹೊಲೆಯೊಳಗೆ ಹುಟ್ಟ ಕುಲವನರಸುವೆ,
ಎಲವೋ ಮಾತಂಗಿಯ ಮಗ ನೀನು !
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು

****

ನಮ್ಮ ಲಿಂಗದೇವನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೊ!

-ಬ.ವ.ದೀ. 574

ಹೊಲೆ ಎಂದರೆ ರಕ್ತಸ್ರಾವ, ರಜಸ್ಸು. ತಾಯಿಯಲ್ಲಿ ಆ ಮುಟ್ಟು ತಡೆದಾಗಲೇ ಪಿಂಡಕ್ಕೆ ನೆಲೆ. ಹೀಗಾಗಿ ಜಗತ್ತಿನಲ್ಲಿ ಹುಟ್ಟಿದ ಎಲ್ಲರೂ ಹೊಲೆಯರೇ ! ಯಾರೂ ಮಾನವರಲ್ಲಿ ಜಾತಿ ಭೇದ ಮಾಡುವರೋ, ಅಸ್ಪೃಶ್ಯರೆಂದು ಕೆಲವರನ್ನು ದೂರವಿಡುವರೋ ಇವರೆಲ್ಲ ತಾವೂ ಹುಟ್ಟು ಹೊಲೆಯರೆಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಊರನ್ನು ಶುಚಿಯಾಗಿಡಲು ಸತ್ತ ಪ್ರಾಣಿಯ ಶವವನ್ನು ಒಯ್ಯುವ ಹೊಲೆಯನನ್ನು ಕೀಳು ಎಂದು ಅನ್ನುವಿರಿ. ಹೊತ್ತ ತಂದು ಪ್ರಾಣಿಗಳನ್ನು ನಿರ್ದಯವಾಗಿ ಕೊಲ್ಲುವವರು ಕೀಳಲ್ಲವೆ! ಯಜ್ಞ-ಯಾಗಗಳ ನೆಪದಲ್ಲಿ ಅಜಯಾಗದಲ್ಲಿ ಹೋತವನ್ನು, ಅಶ್ವಮೇಧಯಾಗದಲ್ಲಿ ಕುದುರೆಯನ್ನು, ಗಜ-ಯಾಗದಲ್ಲಿ ಆನೆಯನ್ನು ಮಂತ್ರ ಹೇಳುತ್ತ ಕೊಲ್ಲಲಾಗುವುದು. ತಾಮಸ ಜನರು ದೇವಿಗೆ ಕೋಣ, ಕುರಿ, ಕೋಳಿಗಳನ್ನು ನಿರ್ದಯವಾಗಿ ಎಳೆದು ತಂದು ಕೊಲ್ಲುವರು. ಇದು ಕೀಳು ಕೆಲಸವಲ್ಲವೆ ?

ವೈದಿಕ ಶಾಸ್ತ್ರಗಳು ಹೋತಿನ ಪ್ರಾಣಕ್ಕೆ ಕುತ್ತು ತರುತ್ತವೆ. ನಿಮಗೆ ನಿಜವಾಗಿಯೂ ವೇದಗಳ ಅಂತರಾರ್ಥ ತಿಳಿದಿಲ್ಲ. ನಮ್ಮ ಲಿಂಗದೇವನ ಶರಣರು ಇಂಥ ಯಾವ ಕುಕರ್ಮಗಳನ್ನು ಮಾಡರು, ಸದಾ ಶರಣರೆಂಬ ಸಜ್ಜನರ ಒಡನಾಟದಲ್ಲಿ ಇರುತ್ತಾರೆ. ಉಪಮಾತೀತರಾಗಿ ಆದರ್ಶ ಜೀವನ ನಡೆಸುತ್ತಾರೆ. ಅವರಿಗೆ ಹೋಲಿಕೆ ಕೊಡಲು ಸಾಧ್ಯವೇ ಇಲ್ಲ.

577. ಇಟ್ಟೆಯ ಹಣ್ಣ ತಿಂದ ನರಿ

ಇಟ್ಟೆಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೆ ?
ಹಗಲುಗಾಣದ ಗೂಗೆ ಇರುಳಾಯಿತೆಂದಡೆ
ಜಗಕ್ಕೆ ಇರುಳಪ್ಪುದೆ ಮರುಳೆ ?
ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು,
ಲಿಂಗದೇವಾ. -ಬ.ವ.ದೀ-575

ಕೆಲವು ಹಣ್ಣುಗಳನ್ನು ತಿಂದರೆ ಮತ್ತು ಏರುವುದು. ಮತ್ತೆ ಕೆಲವನ್ನು ತಿಂದರೆ ಕಣ್ಣು ಕತ್ತಲಿಟ್ಟು, ತಲೆ ತಿರುಗುವುದು. ಇಟ್ಟಿಯ ಹಣ್ಣು ತಿಂದರೆ ತಲೆ ಸುತ್ತು ಬರುವುದು. ಹಾಗೆ ತಿಂದ ನರಿ ತನಗೆ ತಲೆ ತಿರುಗುತ್ತಿದೆ ಎಂದು ತಿಳಿಯದೆ, ಹೇಳದೆ ಇಡೀ ಸೃಷ್ಟಿಯೇ ತಿರುಗುತ್ತಿದೆ ಎಂದು ಒರಲಿದರೆ ಅದು ಹಾಸ್ಯಾಸ್ಪದವಲ್ಲವೆ ?

ಹಗಲಿನಲ್ಲಿ ಕಣ್ಣು ಕಾಣದ ಗೂಗೆ ಹಗಲನ್ನೇ ರಾತ್ರಿ ಎಂದುಕೊಳ್ಳುವುದು ಹಗಲು ಗೂಗೆಗೆ ಮಾತ್ರ ರಾತ್ರಿಯಲ್ಲದೆ ಜಗತ್ತಿಗೆಲ್ಲ ರಾತ್ರಿಯಲ್ಲ. ಅದೇ ರೀತಿ ಮಣ್ಣಿನ ಬೊಟ್ಟನ್ನು ಹಣೆಗೆ ತಿಲಕವಾಗಿ ಇಟ್ಟುಕೊಳ್ಳುವ ದ್ವಿಜರ ಮಾತಿನಲ್ಲಿ ಅರ್ಥವೇನಿದೆ.

(ಅಯೋಧ್ಯೆಯಲ್ಲಿ ಒಂದು ದಿನ ಓರ್ವ ಬ್ರಾಹ್ಮಣ ಬಂದು ತನಗೆ ಅನ್ಯಾಯವಾಯಿತೆಂದು ತನ್ನ ಮಗ ಸತ್ತನೆಂದು ಬೊಬ್ಬೆ ಇಟ್ಟ. ಏಕೆಂದು ಶ್ರೀರಾಮನು ಕೇಳಿದಾಗ, ಶಂಭೂಕ ಶೂದ್ರ. ಅವನು ತಪಸ್ಸು ಮಾಡಿದ. ಶೂದ್ರನು ಬ್ರಾಹ್ಮಣನಿಗೆ ವಿಹಿತವಾದ ತಪಸ್ಸನ್ನು ಮಾಡಬಾರದು. ಇದು ಅಧರ್ಮ-ಇದರಿಂದ ಪಾಪ ಸಂಭವಿಸಿದೆ. ಎಂದು ಹೇಳಿದಾಗ ಶ್ರೀರಾಮನು ಕಣ್ಣು ಮುಚ್ಚಿ ತಪಸ್ಸು ಮಾಡುತ್ತಿದ್ದ ಶಂಭೂಕನ ಮೇಲೆ ಬಾಣವನ್ನು ಪ್ರಯೋಗಿಸಿ ಕೊಂದನು. ಬ್ರಾಹ್ಮಣನ ನಂಬಿಕೆ ವೈಯಕ್ತಿಕ; ಅದನ್ನು ಸಾರ್ವತ್ರಿಕಗೊಳಿಸಿದ. ಇಟ್ಟ ಹಣ್ಣು ತಿಂದ ನರಿ ಸೃಷ್ಟಿ ತಿರುಗಿತು ಎಂದು ಬೊಬ್ಬೆ ಇಟ್ಟುದಕ್ಕೆ ಇದು ಉತ್ತಮ ದೃಷ್ಟಾಂತ).

ಹೋಮದ ನೇಮವನ್ನು ಮಾಡಿಕೊಂಡು ಅದೇ ನೆಪದಿಂದ ಹೋತವನ್ನು ಕೊಂದು ತಿನ್ನುವವರೊಡನೆ ಮಾತನಾಡಿ ವಾದ ಮಾಡುವುದಾದರೂ ಏಕೆ ?. ಎಂದು ಗುರು ಬಸವಣ್ಣನವರು ಚರ್ಚೆಯಿಂದ ದೂರ ಸರಿಯುವಂತಿದೆ. ಶೂದ್ರರು ಕೀಳು, ಅವರು ಮಾಂಸಾಹಾರಿಗಳು; ಅಸ್ಪೃಶ್ಯರು ಅತ್ಯಂತ ಕೀಳು. ಅವರು ಸತ್ತ ಪ್ರಾಣಿಗಳನ್ನು ಎಳೆದೊಯ್ಯುತ್ತಾರೆ, ಸತ್ತ ದನದ ಮಾಂಸ ತಿನ್ನುತ್ತಾರೆ. ಎಂಬುದು ಸವರ್ಣೀಯರ ವಾದ(ವಾಗಿತ್ತು) ನಿಜ, ಆದರೆ ಹೋತವನ್ನು ಎಳೆದು ತಂದು, ಕೊಂದು, ತುಪ್ಪದಲ್ಲದ್ದಿ ಹೋಮದ ಹೆಸರಿನಲ್ಲಿ ಮಾಂಸವನ್ನು ಬೇಯಿಸಿ ತಿನ್ನುವುದು ಮಾಂಸಾ ಹಾರವಲ್ಲವೆ? ಎಂದು ಕೇಳಿದರೆ ಇಲ್ಲ, ಅದು ಶಾಸ್ತ್ರ ವಿಧಿಸಿರುವ ನೇಮ, ಎಲ್ಲರೂ ಪಾಲಿಸಬೇಕಾದುದು ಎಂಬ ಉತ್ತರ ಕೊಡುವ ಅನಾಮಿಕರೊಡನೆ ಮಾತನಾಡುವುದು ದಡ್ಡತನ ಎಂದು ಗುರು ಬಸವಣ್ಣನವರು ನುಡಿಯುತ್ತಾರೆ.

(ಹೋಮವು ಅಹಿಂತಾತ್ಮಕ, ಯಜ್ಞವು ಹಿಂಸಾತ್ಮಕ ಎಂದು ನಾನು ತಿಳಿದಿದ್ದೆ. ಆದರೆ ಗುರು ಬಸವಣ್ಣನವರ ವಚನದ ಪ್ರಕಾರ ಹೋಮವು ಹಿಂಸಾತ್ಮಕ ಕ್ರಿಯೆ ಎಂದು ತಿಳಿದು ಬರುತ್ತದೆ. ಹೋಮದಲ್ಲಿ ತುಪ್ಪ, ಚಂದನ, ವಸ್ತ್ರಗಳು, ಕಡುಬು ಇತ್ಯಾದಿ ಅರ್ಪಿಸಲಾಗುವುದು. ಯಜ್ಞ-ಯಾಗದಲ್ಲಿ ಪ್ರಾಣಿವಧೆ ಇರುವುದು. ಎಂಬ ಭಾವ ನನ್ನದಾಗಿತ್ತು. ಆ ಕಾಲದ ಆಚರಣೆ ಏನಿತ್ತೋ?)

578. ಯಾಂತ್ರಿಕ ಜಪ, ಧ್ಯಾನ

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ
ಬಿಟ್ಟಮಂಡೆವೆರಸಿ ಬಾಯ ಮಿಡುಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ-
ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಲಿಂಗದೇವನರಿಯದೆ ಮೊರೆಯಿಡುವಂತೆ !

-ಬ.ವ.ದೀ-576

ಮೀಂಬುಲಿಗನ ಹಕ್ಕಿ (ಬಕಪಕ್ಷಿ-King Fisher) ನದಿಯ ತಟಾಕದಲ್ಲಿ ಸ್ಥಿರವಾಗಿ ಅಲ್ಲಾಡದೆ ನಿಂತಿರುತ್ತದೆ. ಮೀನು ಹತ್ತಿರ ಸುಳಿದಾಗ ಗಬಕ್ಕನೆ ಹಿಡಿಯುತ್ತದೆ. ಹಾಗೆ ಕೆಲವು ಸಾಧಕರು ನದಿಯ ತೀರದಲ್ಲಿ ಕುಳಿತು ಮೂಗು ಹಿಡಿದು ಪ್ರಾಣಾಯಾಮವನ್ನು ಅಭ್ಯಾಸ ಮಾಡುತ್ತ ಧ್ಯಾನಾಸಕ್ತರಾಗುವರು. ಇನ್ನು ಕೆಲವರು ಮಂಡೆ (ತಲೆ)ಯ ಕೂದಲನ್ನು ಬೆಳೆಸುತ್ತ, ಪಿಟಿಪಿಟಿ ಎಂದು ತುಟಿಯನ್ನು ಮಿಟುಕಿಸುತ್ತ ಕಣ್ಣು ಮುಚ್ಚಿಕೊಂಡು ಬೆರಳನ್ನು ಎಣಿಸುವಂತೆ ಆಡಿಸುತ್ತ

ಜಪ ಮಾಡುವರು. ಮತ್ತೆ ಕೆಲವರು ರುದ್ರಾಕ್ಷಿ ಸರ, ತುಳಸಿ ಮಾಲೆಗಳನ್ನು ಬಳಸಿ ಜಪಮಾಡುವರು. ಕೆಲವೊಮ್ಮೆ ಅವರ ಆಂತರ್ಯವೇ ಬೇರೆ ಇರುತ್ತದೆ. ಮೀಂಬಲಿಗನ ಹಕ್ಕಿಯು ನಿಶ್ಚಲವಾಗಿ ಧ್ಯಾನ ಮಾಡುವ ತಾಪಸಿಯಂತೆ ನಿಂತುಕೊಳ್ಳುವ ಉದ್ದೇಶ ಮೀನನ್ನು ಹಿಡಿಯುವುದೇ ಆಗಿರುತ್ತದೆ. ಹಾಗೆ ಕೆಲವರು ಧಾರ್ಮಿಕತೆಯ ಸೋಗು ಹಾಕುವುದು ಇನ್ನೊಬ್ಬರಿಗೆ ಟೋಪಿ ಹಾಕುವುದು ಅರ್ಥಾತ್ ಮೋಸ ಮಾಡುವುದೇ ಆಗಿರುತ್ತದೆ. ವೈದಿಕರು ಸಂಧ್ಯಾವಂದನೆ, ವಿಶೇಷಪೂಜೆ ಮಾಡುವಾಗ ಹುಲ್ಲು ಗರಿಕೆಯ ಉಂಗುರವನ್ನು ಬೆರಳಿಗೆ ಹಾಕಿಕೊಂಡು ಪೂಜೆ ಮಾಡುವರು. (ದೀಕ್ಷೆ ಕೊಡುವಾಗ ಅದೇ ರೀತಿ ಒಂದು ಚಿಕ್ಕ ದರ್ಭೆಯನ್ನು ತಲೆಯ ಮೇಲಿಡುವರು. ಶೈವ ಮಾರ್ಗಿ ಗುರುಗಳು ತಲೆಯ ಮೇಲೆ ಹಸ್ತವನ್ನಿಟ್ಟು ಮಂತ್ರೋಪದೇಶ ಮಾಡುವರು) ಆ ಗರಿಕೆಯ ಉಂಗುರ ಮೇಲೆ ಕೆಳಗೆ ಆಡುತ್ತಿರುತ್ತದೆ. ಇದು ಗುರು ಬಸವಣ್ಣನವರಿಗೆ, ದೇವರ ಸ್ವರೂಪವನ್ನು ಅರಿಯದೆ ಆ ಗರಿಕೆ ದೇವರಲ್ಲಿ ಮೊರೆ ಇಡುವಂತೆ, ತೋರುತ್ತದೆ.

ಗುರು ಬಸವಣ್ಣನವರ ಉದ್ದೇಶ, ಧ್ಯಾನ ಮಾಡುವುದು, ಪ್ರಾಣಾಯಾಮ ಮಾಡುವುದು, ಜಪ ಮಾಡುವುದು, ಸಂಧ್ಯಾವಂದನೆ ತಪ್ಪು ಎನ್ನುವುದಲ್ಲ. ಕೇವಲ ವೈಯಕ್ತಿಕ ಮುಕ್ತಿಯಲ್ಲಿ ಆಸಕ್ತರಾಗಿ ನದಿ, ಗಿರಿ, ಕಂದರಗಳನ್ನು ಆಶ್ರಯಿಸುವಿಕೆ, ಸಾಮಾಜಿಕ ಚಿಂತನೆ ಇಲ್ಲದೆ ಮಾಡುವ ಧ್ಯಾನ, ಅಂತರಂಗ ಶುದ್ಧಿ ಮಾಡಿಕೊಳ್ಳದೆ ಮಾಡುವ ಯಾಂತ್ರಿಕ ಜಪ, ಆಧ್ಯಾತ್ಮಿಕ ಸ್ಪರ್ಶವಿಲ್ಲದೆ ಮಾಡುವ ಸಂಧ್ಯಾವಂದನೆ, ಹೋಮ-ಹವನ ಮುಂತಾದವು ನಿರರ್ಥಕ ಎಂಬುದೇ ಈ ವಚನದ ಆಶಯ.

579. ಯಾಂತ್ರಿಕ, ಹಿಂಸಾತ್ಮಕ ಭಕ್ತಿ ಬೇಡ

ಮಾಣದೆ ಅರಳೆಯ ಮರನ ತಿಟ್ಟನೆ ತಿರುಗುವ ಗಾಣದೆತ್ತಿನಂತೆ
ಪೂರ್ವಲಿಖಿತ ಮುಂದುಗಾಣಲೀಯದು
ವಾಯಕ್ಕೆ ಕೆಡಬೇಡ ಮನುಜಾ.
ಮಾಣದೆ ಪೂಜಿಸು ಲಿಂಗವ.
ಹೆರರ ಗೋಣ ಕೊಯ್ವೆನೆಂದು ಮಂತ್ರವನೋದುವ
ನೇಣುಗಾರರ ಮೆಚ್ಚ ಲಿಂಗದೇವ !

-ಬ.ವ.ದೀ-577

ಅರಳಿಯ ಮರವನ್ನು ಕೆಲವರು ಗಾಣದೆತ್ತಿನಂತೆ ಸುತ್ತಿಯೇ ಸುತ್ತಿದರು. ಅವರ ಅಜ್ಞಾನದಿಂದ ಹೊರಬರದಂತೆ ಅವರ ಪೂರ್ವಲಿಖಿತ(ಹಣೆಯ ಬರಹ)ವು ಮುಂದಿನ ದಾರಿಯನ್ನು ತೋರದು. ಮೂಢ ನಂಬಿಕೆಯಿಂದ ವಿಲಕ್ಷಣ ಸಮಾಧಾನ ಉಂಟಾಗುವುದಾದರೂ ಅದು ವ್ಯರ್ಥಪ್ರಯತ್ನ ಗುರಿ ಎಡೆಗೆ ಕರೆದೊಯ್ಯದು. ಆದ್ದರಿಂದ, "ಎಲೆ ಮನುಷ್ಯ ವ್ಯರ್ಥ ಪ್ರಯತ್ನದಿಂದ ಆಯುಷ್ಯವನ್ನು, ಸಮಯವನ್ನೂ ಹಾಳು ಮಾಡಿಕೊಳ್ಳಬೇಡ. ನಿಜವಾದ ದೇವರನ್ನು ಇಷ್ಟಲಿಂಗದ ಮೂಲಕ ಪೂಜಿಸು; ದೇವರ ಸ್ವರೂಪವನ್ನು ಅರಿತುಕೊ. ಕೆಲವರು ಮೂಢರಾದರೆ ಇನ್ನು ಕೆಲವರು ಹಿಂಸಾತ್ಮಕ ಭಕ್ತಿಯುಳ್ಳವರು. ಅವರು ಪರ ಜೀವಗಳ ಹತ್ಯೆಯನ್ನು ಮಂತ್ರ ಹೇಳುತ್ತಾ ಮಾಡುವರು. ದೈಹಿಕವಾಗಿ ಪ್ರಾಣಿಗಳನ್ನು ಕೊಂದು ಹಿಂಸೆ ಮಾಡುವವರು ಕೆಲವರಾದರೆ, ಕ್ರೂರ ಮತ್ತು ವ್ಯಂಗ್ಯ ಮಾತುಗಳಿಂದ ಹಿಂಸಿಸುವವರು ಮತ್ತೆ ಕೆಲವರು, ಮಾನಸಿಕ

ವಾಗಿ ಕೇಡು ಬಯಸಿ ಮತ್ಸರಿಸಿ ಹಿಂಸೆ ಮಾಡುವವರು ಮತ್ತೆ ಕೆಲವರು. ಇವರೆಲ್ಲರೂ ಕೊಲೆಗಾರರೆ. ಇಂಥವರಿಗೆ ಲಿಂಗದೇವನು ಒಲಿಯಲು ಸಾಧ್ಯವೆ?

580. ಮೂಢ ಭಕ್ತಿ ಸಲ್ಲದು.

ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯಾ!
ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರಯ್ಯ, ಲಿಂಗದೇವಾ ? -ಬ.ವ.ದೀ-578

ಕೆಲವು ಕ್ಷೇತ್ರಗಳನ್ನು ಪುಣ್ಯಕ್ಷೇತ್ರಗಳೆಂದು ಭಾವಿಸಿ ಅಲ್ಲಿರುವ ಕೊಳ, ನದಿಗಳಲ್ಲಿ ಮುಳುಗಿ, ಸ್ನಾನ ಮಾಡಿ ಪಾವನರಾದೆವೆಂದು ಕೆಲವು ಮೂಢರು ಭಾವಿಸುತ್ತಾರೆ. (ಅನೇಕರು ಕೊಳ, ನದಿಗಳಲ್ಲಿ ದುಡ್ಡು ಎಸೆಯುವರು, ಹೊಸ ಸೀರೆ, ಕುಪ್ಪಸದ ಬಟ್ಟೆಗಳನ್ನು ತೇಲಿ ಬಿಡುವರು, ತೆಂಗಿನ ಕಾಯಿ ಒಡೆದು ಹೋಳುಗಳನ್ನು ನದಿಯಲ್ಲಿ ಎಸೆಯುವರು. ಇದೆಲ್ಲವೂ ಹಣದ ಅಪವ್ಯಯ. ಅದೇ ಹಣವನ್ನು, ಬಟ್ಟೆಗಳನ್ನು ಬಡಬಗ್ಗರಿಗೆ ಹಂಚಿದರೆ ಎಷ್ಟು ಪ್ರಯೋಜನಕಾರಿ!) ಬಿಲ್ವ, ಅರಳೀ ಮರ, ತುಳಸಿ, ಬನ್ನಿ, ಎಕ್ಕೆ, ವೀಳ್ಯದೆಲೆ ಮುಂತಾದ ಗಿಡಗಳನ್ನು ಪೂಜಿಸುವರು. ಕೆಲವು ಗಿಡಗಳಿಗೆ ಸೀರೆ ಉಡಿಸುವುದುಂಟು. ಅರಳಿ ಗಿಡ ಮತ್ತು ಬೇವಿನ ಗಿಡ ಜೊತೆಗೆ ಬೆಳೆದಿದ್ದರೆ ಅವುಗಳಿಗೆ ಮದುವೆ ಮಾಡಿಸುವುದೂ ಉಂಟು, ಮಾನವನಿಗಿಂತಲೂ ಕೆಳಗಿನ ಸ್ತರದಲ್ಲಿರುವ ಜಡ ವಸ್ತುಗಳಾದ ನೀರು, ಗಿಡ ಮುಂತಾದವು ಏನು ವರ ಕೊಡಬಲ್ಲವು ? ಬೇಸಿಗೆಯಲ್ಲಿ ಜಲವು ಬತ್ತುವುದು, ಮರವು ಒಣಗುವುದು. ಇವನ್ನು ದೇವರು ಎಂದು ನಚ್ಚದವರು ಲಿಂಗದೇವಾ, ನಿಮ್ಮನ್ನು ಎತ್ತ ಬಲ್ಲರು? ಎಂದು ಗುರು ಬಸವಣ್ಣನವರು ಮೂಢರ ಭಕ್ತಿಯನ್ನು ನೋಡಿ ವಿಷಾದಿಸುವರು.

581.ವೈಯಕ್ತಿಕ ಮುಕ್ತಿಯ ಬಯಕೆ ಸಲ್ಲದು

ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ;
ಇರುಳು ಹಗಲಿನ ನಿದ್ರೆ ಸಾಲದೆ ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ ? ಹೇಳಾ !
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ, ಲಿಂಗದೇವಾ?

-ಬ.ವ.ದೀ-579

ಕಣ್ಣುಗಳನ್ನು ಮುಚ್ಚಿಕೊಂಡು ಕನ್ನಡಿಯನ್ನು ನೋಡಿದರೆ ಏನು ಕಾಣಲು ಸಾಧ್ಯ? ಇರುಳು ಅಂದರೆ ರಾತ್ರಿಯ ವೇಳೆ ಮಾಡುವ ನಿದ್ರೆ, ಹಗಲಿನಲ್ಲಿ ವಿಶ್ರಾಂತಿ ಬೇಕೆಂದು ಮಾಡುವ ನಿದ್ರೆ ಸಾಲದೆಂಬಂತೆ ಕಾಯಕವನ್ನು ಮಾಡದೆ ಸದಾ ಧ್ಯಾನಾಸಕ್ತರಾಗುತ್ತೇವೆಂದು ಬೆರಳನ್ನು ಆಡಿಸುತ್ತ ಜಪವನ್ನು ಮಾಡುವುದು ಆಶ್ಚರ್ಯಕರವಲ್ಲವೆ? ಮೂಗು ಮುಚ್ಚಿಕೊಂಡು ಸಾಧನೆ ಮಾಡುತ್ತೇವೆ, ಮುಕ್ತಿಯು ಅದರಿಂದ ಸಾಧ್ಯ ಎಂಬುವವರು ಸಾಮಾಜಿಕ ಮಾನವೀಯ ಕಳಕಳಿ ಇಲ್ಲದ

ಸ್ವಾರ್ಥಿಗಳೇ ಸರಿ. ಇಂಥವರನ್ನು ಕಂಡರೆ ನನಗೆ ವ್ಯಥೆಯಾಗುತ್ತದೆ ಎನ್ನುವರು ಗುರು ಬಸವಣ್ಣನವರು.

ವೈದಿಕ ಹಿಂದು ಧರ್ಮದಲ್ಲಿ ಸಾಧಕರ ಕಲ್ಪನೆಯೇ ಒಂದು ಬಗೆ. ಸಾಧಕರು, ಆಶ್ರಮ ಜೀವನ ಎಂದರೆ ಯಾವುದೇ ಪರಿಶ್ರಮ ಮಾಡದೆ ಕೇವಲ ಆಸನ, ಪ್ರಾಣಾಯಾಮ, ಧ್ಯಾನ, ಜಪ,ತಪ, ಅಧ್ಯಯನ ಮಾಡುತ್ತ ಇರುವುದು. ವೈಯಕ್ತಿಕವಾಗಿ ನೆಮ್ಮದಿಯಿಂದ ಇರುವುದು. ಸಮಾಜದ ಸಮಸ್ಯೆಗಳನ್ನು ಅರಿಯುವುದು, ಅವಕ್ಕೆ ಸ್ಪಂದಿಸುವುದು, ಮಾನವೀಯ ಕೆಲಸ, ಸೇವಾ ಕಾರ್ಯ, ಧರ್ಮ ಪ್ರಚಾರ ಇದು ಉಪಾಧಿಗಳು ಎಂದು ಅಂಥವರು ವಿಡಂಬಿಸುವುದುಂಟು. ಕ್ರೈಸ್ತ ಮಿಷನರಿಗಳು ಹಾಗಲ್ಲ. ಅವರು ಧಾರ್ಮಿಕ ಕಾರ್ಯ ನಿರ್ವಹಣೆಯ ಜೊತೆಗೆ ಸದಾ ಸೇವಾ ನಿರತರಾಗಿರುತ್ತಾರೆ.

ಇಂಥ ಏಕಾಂತವಾಸಿಗಳು ಸ್ವಾರ್ಥಿಗಳು. ಒಬ್ಬ ಶ್ರೀಮಂತ ಸಾಕಷ್ಟು ಹಣ ಗಳಿಸಿ ಇತರರಿಗೆ ಕೊಡದಿದ್ದರೆ ಹೇಗೆ ಲೋಭಿಯೋ ಹಾಗೆ ಒಬ್ಬ ಪಾರಮಾರ್ಗಿರ್ಥಿಕನೂ ಸಮಾಜದ ಕಡೆಗೆ ನೋಡದಿದ್ದರೆ ಅವನೂ ಸ್ವಾರ್ಥಿಯೆ.

582. ಏಕದೇವ ವಿಶ್ವಾಸಿ

ಬ್ರಹ್ಮಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತ್ವವಡೆದು,
ತಮ್ಮ ವಚನಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು;
ತಮ್ಮ ದೈವದ ಬಿಡುವುದಾವುದುಚಿತ?
ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣನಿತ್ತು
ಹಡೆದ್ಯವಲ್ಲವೆ? ಹೇಳಾ!
ಮೂಗ ಮುಚಿ
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ? ಹೇಳಾ!
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ, ಲಿಂಗದೇವಾ?

-ಬ.ವ.ದೀ-579

ಜಂಬೂದ್ವೀಪ (ಭಾರತ)ದಲ್ಲಿ ಮೊದಲು ಏಕೈಕ ಆರಾಧ್ಯ ದೈವ ಶಿವನಾಗಿದ್ದ ಬ್ರಾಹ್ಮಣರಿಂದ ಹಿಡಿದು ಎಲ್ಲ ಜಾತಿ ಜನಾಂಗದವರೂ ಶಿವಪೂಜಕರೆ! ಸ್ಥಾವರ ಲಿಂಗ ರೂಪದಲ್ಲಿ ಶಿವನನ್ನು ಪೂಜಿಸುತ್ತಿದ್ದರು. ಶಂಕರಾಚಾರ್ಯರ ಕಾಲದಲ್ಲಿ (8ನೆಯ ಶತಮಾನ) ಅವರಿಂದಲೇ ಪಂಚಾಯತನ ಪೂಜೆ ಆರಂಭವಾಯಿತು. ಶಿವನ ಜೊತೆಗೆ ವಿಷ್ಣು, ಗಣಪತಿ, ದೇವಿ, ಸೂರ್ಯ ಸೇರಿ ಪೂಜಿಸಲು ಶುರು ಮಾಡಿದರು. ಅದಕ್ಕೇ ಗುರು ಬಸವಣ್ಣನವರು ಕೇಳುತ್ತಾರೆ, "ತಮ್ಮ ದೈವದ ಪೂಜೆ ಬಿಡುವುದು ಹೇಗೆ ಸರಿ? ಎಂದು. ಸ್ವತಃ ವಿಷ್ಣುವೇ ಶಿವನ ಪೂಜೆಯನ್ನು ಮಾಡಿದ್ದಾನೆ. ಒಮ್ಮೆ ಸಾವಿರ ಕಮಲದ ಹೂಗಳಿಂದ ಪೂಜಿಸುವ ಪೂಜೆಯನ್ನು ನೇಮ ಹಿಡಿದಿದ್ದಾಗ ಒಂದು ಹೂವು ಕಡಿಮೆ ಬಿತ್ತೆಂದು ತನ್ನ ಕಣ್ಣುಗಳನ್ನೇ ಕಿತ್ತು ಶಿವಲಿಂಗಕ್ಕೆ ವಿಷ್ಣುವು ಅರ್ಪಣೆ ಮಾಡಿದ್ದಾನೆ.

ವಿಪ್ರರನ್ನು ಕಷ್ಟಜೀವಿಗಳೆಂದು ಕರೆದು, ಇವರಿಗೆ ಎಂದು ಬುದ್ಧಿ ಬರುವುದೋ ಎಂದು

ವಿಷಾದಿಸಿ, ಗುರು ಬಸವಣ್ಣನವರು ಹೇಳುತ್ತಾರೆ, ಪಡಬಾರದ ಕಷ್ಟ ಬಂದರೂ ಏಕದೇವ ನಿಷ್ಠೆಯನ್ನು ಇರುವ ಅಳವಡಿಸಿಕೊಳ್ಳುವುದಿಲ್ಲ. ಎಂದು ಸುಳ್ಳು ಹೇಳುವವನೇ ಹೊಲೆಯ ಎಂದು ಲೋಕದಲ್ಲಿ ಜನರು ಆಡುವರು. ಸುಳ್ಳು ಹೇಳಿದ ಬ್ರಹ್ಮನ ತಲೆಯೊಂದು ಕತ್ತರಿಸಲ್ಪಟ್ಟಿತು. ಮುಗ್ಧ, ಮೂಕ ಪ್ರಾಣಿಗಳನ್ನು ಮಂತ್ರ ಹೇಳುತ್ತ ವೈಧಾನಿಕವಾಗಿ ಯಜ್ಞದಲ್ಲಿ ಕೊಂದು ಪ್ರಸಾದವೆಂದು ತಿನ್ನುವುದು ಯಾವ ಧರ್ಮ? ದಕ್ಷನು ಯಾಗವನ್ನು ಮಾಡಿದಾಗ ವೀರಭದ್ರನು ಹೋಗಿ ಅದನ್ನು ನಾಶ ಮಾಡಿದ್ದನ್ನು ತಿಳಿದಾದರೂ ಇವರು ಬುದ್ಧಿ ಕಲಿಯಬಾರದೆ? ಸೃಷ್ಟಿಕರ್ತ ಲಿಂಗದೇವನನ್ನು ನಂಬಿದ ಶರಣರು ಯಜ್ಞದಂತಹ ಪಾಪ ಕಾರ್ಯವನ್ನು ಮಾಡಿದ ಅಕ್ಷಯರು, ಅಧಿಕರು, ವಿಪ್ರರು ತಾವು ಶ್ರೇಷ್ಠರೆಂದು ಹೆಮ್ಮೆಯಿಂದ ಹೇಳಿಕೊಂಡರೂ ನಿಜವಾಗಿಯೂ ಆಚರಣೆಯ ದೋಷದಿಂದ ಕೀಳು.

583. ಪರರ ಪಾಪಕ್ಕೆ ಹೊಣೆಯಾಗುವಿಕೆ

ಕುಲದಲ್ಲಿ ಹಾರುವನು ಬ್ರಹೇತಿಗೆ ಸಾರುವನು:
ಆರೋ ಮಾಡಿದ ಪಾಪಕ್ಕೆ ತಾನೆ ಕೈಯಾನುವನು !
ಸರಿಯೆ ದೇವಭಕ್ತಂಗಿವನು?
ಸರಿಯೆ ಲಿಂಗಭಕ್ತಂಗಿವನು ?
ಬಡಗಿ ಮಾಚಲದೇವಿಯ ಕುಲಜೆಯ ಮಾಡೆಹೆವೆಂದು
ಹೊನ್ನ ಕಪಿಲೆಯ ರಾವಣಶಾಖದ ಉಚ್ಚಿಷ್ಟದ ಹಾಲಿನಿಂದ
ಕೋಳನಟ್ಟುಂಬುವರನೇನೆಂಬೆ,
ಲಿಂಗದೇವಾ?

-ಬ.ವ.ದೀ-581

ಕುಲದ ದೃಷ್ಟಿಯಿಂದ ತಾನು ಬ್ರಹ್ಮಜ್ಞಾನಿ ಬ್ರಾಹ್ಮಣ ಅತಿ ಶ್ರೇಷ್ಠ ಎಂದು ಹಾರುವವನು ಹೇಳಿಕೊಳ್ಳುವನು. ಅನ್ಯರು ಮಾಡಿದ ಪಾಪವನ್ನು ಪೂಜಾದಿ ಕ್ರಿಯೆಗಳ ಮೂಲಕ ತಾನೇ ತೆಗೆದುಕೊಳ್ಳುವುದಾಗಿ ಹೇಳುವನು. ಪ್ರಾಯಶ್ಚಿತ್ತ ಮುಂತಾದ ಕ್ರಿಯೆಗಳಿಂದ ಪಾಪ ನಿವಾರಣೆಯಾವುದೆಂದು ಮೂಢರನ್ನು ನಂಬಿಸಲಾಗುವುದು. (ನವಗ್ರಹ ಪೂಜೆ ಮಾಡಿಸಿ, ಆಗ ಮನೆಯವರು ಕೊಡುವ ದಾನದ ವಸ್ತುಗಳನ್ನು ತೆಗೆದುಕೊಂಡು ಹೋಗುವರು. ಮನೆಯವರ ಕಷ್ಟ, ವಿಘ್ನ, ಇತ್ಯಾದಿ ಅನಿಷ್ಠಗಳನ್ನು ತಾವು ತೆಗೆದುಕೊಂಡು ಹೋಗುವುದಾಗಿ ಹೇಳುವರು. ಹಾಗೆ ಹೋಗುವಾಗ ಯಾರೂ ನೋಡಬಾರದು. ನೋಡಿದವರಿಗೆ ಅನಿಷ್ಠವು ಬೆನ್ನು ಹತ್ತುತ್ತದೆ. ಹಾಗೆ ಅಕಸ್ಮಾತ್ ನೋಡಿದರೆ ನೋಡಿದವರ ಮನೆಯಲ್ಲಿ ನವಗ್ರಹ ಪೂಜೆ ಮಾಡಿಸಬೇಕು. ಎಂದು ನಂಬಲಾಗುತ್ತದೆ. ಇಂಥ ಮೂಢ ಆಚರಣೆ ಮಾಡದ ಲಿಂಗಭಕ್ತರು ಸೃಷ್ಟಿಕರ್ತ ಲಿಂಗದೇವನ ಆರಾಧಕರು. ಇವರಿಗೆ ವಿಪ್ರರು ಸರಿಸಾಟಿಯಲ್ಲ.

ಬಡಗಿ ಮಾಚಲದೇವಿ ಶೂದ್ರಳು. ಸುಂದರಿಯಾದ ಆಕೆಯನ್ನು ಕ್ಷತ್ರಿಯ ವರ್ಣದ ರಾಜನು ರಾಣಿಯನ್ನಾಗಿ ಮಾಡಿಕೊಳ್ಳಬಯಸಿದ. ಆಗ ವಿಪ್ರರ ಸಲಹೆ ಕೇಳಿದಾಗ ಅವರು ಸೂಚಿಸಿದ ಪರಿಹಾರವೆಂದರೆ, ಒಂದು ದೊಡ್ಡ ಹಸುವಿನಾಕಾರದ ಗೊಂಬೆಯನ್ನು ಚಿನ್ನದಲ್ಲಿ ಮಾಡಬೇಕು. ಅದರಲ್ಲಿ ಹಾಲನ್ನು ತುಂಬಿ, ಆ ಹಾಲಿನಲ್ಲಿ ಅಡಿಗೆ ಮಾಡಿ ವಿಪ್ರರು ಊಟ ಮಾಡಬೇಕು. ಆಗ

ಮಾಚಲದೇವಿ ಕುಲಜೆಯಾಗುವಳು. ಇಂಥ ಸಲಹೆ ನೀಡಿ, ಆ ಉಚಿಷ್ಟದ ಹಾಲಿನಲ್ಲಿ ಅಡಿಗೆ ಮಾಡಿಕೊಂಡು ತಿಂದವರ ಬಗ್ಗೆ ಏನು ಹೇಳೋಣ ಎಂದು ಗುರು ಬಸವಣ್ಣನವರು ವಿಷಾದಿಸುತ್ತಾರೆ.

ಶ್ರಾವಣ ಮಾಸದ ಕಾರ್ಯಕ್ರಮ

ಶರಣ ಬಂಧುಗಳೇ,

ಶ್ರಾವಣ ಮಾಸ ಶರಣ ಧರ್ಮದಲ್ಲಿ ಮಹತ್ವಪೂರ್ಣವಾದ ಮಾಸ. ಉತ್ತರ ಕರ್ನಾಟಕದಲ್ಲಿ ಪ್ರತಿಗ್ರಾಮದಲ್ಲೂ ಪ್ರವಚನ, ಪುರಾಣ ಶ್ರವಣ ನಡೆಯುತ್ತದೆ. ಗುರು ಬಸವಣ್ಣನವರು ಮರ್ತ್ಯಲೋಕದ ಕರ್ತವ್ಯ ಪೂರೈಸಿ ಲಿಂಗದೇವನಲ್ಲಿ ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಬಯಲಾದರು. ಇದರಿಂದ ಶ್ರಾವಣ ಮಾಸವು ಪವಿತ್ರ ಮಾಸವೆಂಬ ನಂಬುಗೆ ಬೆಳೆದಿರಬಹುದು. ಶ್ರಾವಣ ಮಾಸದಲ್ಲಿ ನಡೆಸಬೇಕಾದ ಕೆಲವು ಕಾರ್ಯಗಳೆಂದರೆ

1. **ವಚನ ಪಠಣ :** ವಚನ ಸಾಹಿತ್ಯವು ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ. ಸ್ನಾನ-ಪೂಜೆ ಪೂರೈಸಿದ ಮೇಲೆ ವಚನ ಗ್ರಂಥಗಳ ಪಠಣ, ಲೇಖನ ಮಾಡುವುದು ಆದ್ಯ ಕರ್ತವ್ಯ.

2. **ಬಸವ ಜ್ಯೋತಿ ಕಾರ್ಯಕ್ರಮ :** ಹಿಂದಿನ ಕಾಲದಲ್ಲಿ ಜಂಗಮರನ್ನು ಬರಮಾಡಿ ಕೊಂಡು ಗುರು -ಲಿಂಗ-ಜಂಗಮ ಪೂಜೆ, ಅನುಭವ ಗೋಷ್ಠಿ ನಡೆಸಲಾಗುತ್ತಿತ್ತು. ಈಗ ಕಾಲ ಬದಲಾಗಿದೆ. ಆದ್ದರಿಂದ ಶ್ರಾವಣ ಮಾಸದಲ್ಲಿ ಒಂದು ದಿನವಾದರೂ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಏರ್ಪಡಿಸಿ, ಶರಣ ಬಂಧುಗಳನ್ನು ಬರಮಾಡಿಕೊಂಡು, ಬಸವ ಪೂಜೆ-ಪ್ರಾರ್ಥನೆ ನೆರವೇರಿಸಿ, ಅನುಭವ ಗೋಷ್ಠಿ ನಡೆಸಿ, ಪ್ರಸದವನ್ನು ವಿತರಿಸಬೇಕು.

ರಾಷ್ಟ್ರೀಯ ಬಸವ ದಳಗಳವರು ಶ್ರಾವಣ ಶುದ್ಧ ಪ್ರತಿಪದೆಯಂದು (31-7-2011)ಬಸವ ಜ್ಯೋತಿ ಕಾರ್ಯಕ್ರಮ ಆರಂಭಿಸಿ, ಭಾದ್ರಪದ ಚೌತಿ (1-9-2011)ರಂದು ಸಮಾರೋಪ ಮಾಡಬೇಕು. ದಿನಾಲೂ ಒಬ್ಬರ ಮನೆಯಲ್ಲಿ ಬಸವ ಜ್ಯೋತಿ ನಡೆಸಬೇಕು. ಹೆಚ್ಚಿನ ಮನೆಗಳಿಗೆ ಆಹ್ವಾನವಿದ್ದರೆ ಎರಡು ತಂಡಗಳಲ್ಲಿ ಹೋಗಿ ಕಾರ್ಯಕ್ರಮ ನಡೆಸಬೇಕು. ಭಾದ್ರಪದ ಚೌತಿಯಂದು ಬಸವ ಜ್ಯೋತಿಯ ಸಮಾರೋಪ, ಪೂಜ್ಯ ಅಪ್ಪಾಜಿ, ಪೂಜ್ಯ ಗಂಗಾಮಾತಾಜಿ ಹಾಗೂ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ- ಇವನ್ನು ಆಚರಿಸಬೇಕು.

3. **ಬಸವ ಪಂಚಮಿಯು** ದಿ.4-08-2011ರಂದು ನೀಲಾಂಬಿಕಾ ಷಷ್ಠಿಯು ದಿ.5-8-11 ರಂದು ಒದಗಿ ಬಂದಿದೆ. ಆದ್ದರಿಂದ ಶರಣ ಬಂಧುಗಳು ತಪ್ಪದೆ ಆಚರಿಸಬೇಕು. ಂದು ಬಸವೇಶ್ವರ ಪೂಜಾವ್ರತವನ್ನು ಮಾಡುವುದಲ್ಲದೆ ಕಾರ್ಯಕ್ರಮವನ್ನೂ ಏರ್ಪಡಿಸಬೇಕು. ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೌಢ್ಯತೆಯನ್ನು ಬಿಡಿಸಿ ಜನರು ಅದೇ ಹಣವನ್ನು ಮಾನವೀಯ ಕಾರ್ಯಗಳಿಗೆ ಬಳಸುವಂತೆ ಪ್ರೇರಣೆ ನೀಡಬೇಕು.

ಶ್ರಾವಣ ಮಾಸವನ್ನು ಅತ್ಯಂತ್ಯ ಅರ್ಥ ಗರ್ಭಿತವಾಗಿ ಆಚರಿಸುವಿರಾಗಿ ನಂಬುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ

ಡಾ॥ ಎಂ.ಚಿದಾನಂದ ಮೂರ್ತಿಯವರ
ಪತ್ರ ಅಸಮಂಜಸ

- ಸು.ಮಲ್ಲಿಕಾರ್ಜುನಪ್ಪ

ವಿಜಯ ಕರ್ನಾಟಕ ಪತ್ರಿಕೆಯ ವಾಚಕರ ವಿಜಯ ವಿಭಾಗದಲ್ಲಿ 26-5-2011ರಂದು ಪ್ರಕಟವಾಗಿರುವ ವೀರಶೈವ-ಲಿಂಗಾಯತ ಒಂದೇ ಎಂಬ ಡಾ॥ ಎಂ.ಚಿದಾನಂದ ಮೂರ್ತಿಯವರ ಹೇಳಿಕೆ ಅಸಮಂಜಸ. ವೀರಶೈವ ಮತ್ತು ಲಿಂಗಾಯತ ಸಮಾನಾರ್ಥದ ಪದಗಳಲ್ಲ. ಶಿವನಲ್ಲಿ ವೀರತಮವಾದ ಭಕ್ತಿಯುಳ್ಳವನೇ ವೀರಶೈವ, ವೀರವ್ರತ ಎಂದೂ ಹೇಳಲಾಗಿದೆ. ವೀರ ಎಂದರೆ ಶೂರ ಎಂಬ ಅರ್ಥವಿದ್ದು ವೀರಶೈವ ಪದದ ಉತ್ತರಾರ್ಧವೇ ಶೈವ ಎಂಬುದನ್ನು ಸೂಚಿಸುತ್ತದೆ. ಹೀಗಾಗಿ ವೀರಶೈವವು ಬಸವ ಪೂರ್ವದ, ವೈದಿಕ ಮೂಲದ, ಶೈವಮತದ ಸಪ್ತಪಂಥಗಳಲ್ಲಿ ಒಂದು ಮಾತ್ರ. ಯಾವುದೇ ವಚನ, ಕೃತಕ ವಚನದಲ್ಲಾಗಲಿ ವೀರಶೈವ ಪದವಿದ್ದ ಮಾತ್ರಕ್ಕೆ ವೀರಶೈವ-ಲಿಂಗಾಯತ ಒಂದೇ ಎಂದು ತಿಳಿಯಬೇಕಿಲ್ಲ. ಆದರೆ ಹಾನಗಲ್ ಕುಮಾರ ಸ್ವಾಮಿಯವರು ಅಖಿಲ ಭಾರತ ವೀರಶೈವ ಮಹಾಸಭಾ ಎಂಬ ಸಂಘವನ್ನು 1904ರಲ್ಲಿ ಹುಟ್ಟು ಹಾಕಿ, ಇಷ್ಟಲಿಂಗಧಾರಿ ಲಿಂಗಾಯತರಲ್ಲಿ ವೀರಶೈವರು ಎಂಬ ಭ್ರಮೆ ಹುಟ್ಟಿಸಿದರು.

ಲಿಂಗ ಎಂದರೆ ದೇವರು ಎಂಬ ಅರ್ಥವಿದ್ದು, ಲಿಂಗಾಯತ ಪದವೇ ಇಷ್ಟಲಿಂಗವನ್ನು ಆಯತ ಮಾಡಿಕೊಂಡವರೆಂಬುದನ್ನು ಹೇಳುತ್ತದೆ. ಗುರು ಬಸವಣ್ಣನವರು ಲಿಂಗಾಯತ ಧರ್ಮವನ್ನು ಹೊಸದಾಗಿ ಸ್ಥಾಪಿಸಿದಾಗ ಅನೇಕ ಜಾತಿ ಕಸಬುಗಳವರು ಬಂದು ಲಿಂಗಾಯತ ಧರ್ಮಕ್ಕೆ ಸೇರಿದಂತೆ ವೀರಶೈವರೂ ಸಹ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿರುವ ವಚನ ಸಾಹಿತ್ಯ ಸಂವಿಧಾನದ, ವೈಜ್ಞಾನಿಕವಾದ, ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ, ದಯೆ- ಅಹಿಂಸೆ-ಸಸ್ಯಾಹಾರಗಳನ್ನು ಕಲಿಸಿದ, ಉದ್ಯೋಗ-ಲಿಂಗ-ಜಾತಿ ಭೇದಗಳಿಲ್ಲದೆ ಎಲ್ಲ ಮಾನವರಿಗೆ ಧರ್ಮ ಸಂಸ್ಕಾರ ಕೊಡಬಲ್ಲ, ಒಂದು ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದ ಅಹಿಂದು ಅವೈದಿಕ, ಪರಿಪೂರ್ಣ ಸ್ವತಂತ್ರ ಧರ್ಮ.

ಸತ್ಯ ಹೀಗಿರುವಾಗ ವೀರಶೈವ-ಲಿಂಗಾಯತ ಎರಡೂ ಒಂದೇ ಆಗಿರಲು ಸಾಧ್ಯವೇ ಇಲ್ಲ. ಒಂದು ಧರ್ಮಕ್ಕೆ ಒಂದೇ ಹೆಸರಿರುವುದೇ ವಿನಾ ಹಲವಾರು ಹೆಸರಿರುವುದಿಲ್ಲ. ವೀರಶೈವ -ಲಿಂಗಾಯತ ಪದಗಳಲ್ಲಿನ ವ್ಯತ್ಯಾಸವನ್ನು ಯಾರೋ ಮಾಡಿದ್ದಲ್ಲ. ಮೂಲದಲ್ಲಿಯೇ ಈ ಪದಗಳಲ್ಲಿ ವ್ಯತ್ಯಾಸವಿದೆ. ಇಷ್ಟಲಿಂಗಧಾರಿಗಳಾದ ನಾವು ಅನುಸರಿಸುವ ಧರ್ಮ ಲಿಂಗತತ್ವದ ಲಿಂಗಾಯತವೇ ಹೊರತು ವೀರಶೈವವಲ್ಲ. ಶತಶತಮಾನಗಳಿಂದ ಶೋಷಣೆಗೊಳಗಾಗಿದ್ದ ಜನರನ್ನು ವೈದಿಕ ಪುರೋಹಿತಶಾಹಿ, ಶೈವ ದೇವಾಲಯಶಾಹಿ, ಆಗಮಗಳ ಬಹುದೇವತೋಪಾಸನೆಗಳಿಂದ ಮುಕ್ತಗೊಳಿಸಿದವರು ಬಸವಣ್ಣನವರು. ಅವರ ನೂತನ ಸಂಘಟನೆಯ ಹೆಸರೇ ಲಿಂಗಾಯತ. ಅಂದಿನಿಂದ ಇಂದಿನವರೆಗೆ ಈ ಪದವನ್ನು ಉಳಿಸಿಕೊಂಡು ಬಂದಿರುವುದು ಇತಿಹಾಸ. ಆದ್ದರಿಂದ ವೀರಶೈವ ಪದ ಬಳಕೆ ತಾತ್ವಿಕವಾಗಿ ಮತ್ತು ಐತಿಹಾಸಿಕವಾಗಿ

ಉಚಿವೆನಿಸುವುದಿಲ್ಲ. ವೀರಶೈವವು ಶೈವ ಶಾಖೆಯಾಗಿ ಹಿಂದೂ ಧರ್ಮದ ಅಂಗವಾಗಿ ಬಳಕೆಯಲ್ಲಿರುವುದರಿಂದ ವೀರಶೈವ ಪದವನ್ನು ಉಳಿಸಿಕೊಂಡು ನಾವೆಂದೂ ಸ್ವತಂತ್ರ ಧರ್ಮೀಯರು ಎನಿಸಿಕೊಳ್ಳಲು ಸಾಧ್ಯವಿಲ್ಲ. ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ, ಜನಗಣತಿಯಲ್ಲಿ ಸ್ವತಂತ್ರ ಅಂಕಣಸಹಿತ ಸಂಕೇತ ಸಂಖ್ಯೆ, ಅಲ್ಪ ಸಂಖ್ಯಾತರ ಸ್ಥಾನಮಾನ ಸೌಲಭ್ಯಗಳನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕಾಗಿದೆ. ಆದಕ್ಕಾಗಿ ಲಿಂಗಾಯತ ಧರ್ಮ ಎಂಬ ಪದ ಬಳಕೆ ಇಂದಿನ ತುರ್ತು ಅಗತ್ಯ. ಈ ಪದವನ್ನು ಬಳಸದೆ ಲಿಂಗಾಯತರಿಗೆ ಭವಿಷ್ಯವಿಲ್ಲ. ವೀರಶೈವ ಮಹಾಸಭೆಯ ಹಿತ ಕಾಯುವುದಕ್ಕಾಗಿ ಜಾಗತಿಕ ಧರ್ಮದ ಲಕ್ಷಣಗಳುಳ್ಳ ಒಂದು ಮಹಾನ್ ಶರಣ ಪರಂಪರೆಯ ಲಿಂಗಾಯತ ಧರ್ಮಕ್ಕೆ ಅನ್ಯಾಯ ಮಾಡಬಾರದು. ಲಿಂಗಾಯತದ ಎಲ್ಲ ಒಳಪಂಗಡದವರೂ ಲಿಂಗಧಾರಿಗಳೇ ಆಗಿರುವರು. ಲಿಂಗಧಾರಣೆ ಯಿಂದಲೇ ಈ ಧರ್ಮ. ದೇವರ ಹೆಸರಿಡಿದು ಹುಟ್ಟಿರುವ ಲಿಂಗಾಯತ ಧರ್ಮವು ಬಸವಣ್ಣನವರ ಸ್ವತಂತ್ರ ಪರಿಕಲ್ಪನೆಯೇ ಹೊರತು ಅದು ವೀರಶೈವಕ್ಕೆ ಪರ್ಯಾಯವಾಗಲಿ, ಶೈವಕ್ಕೆ ಮುಂದುವರಿಕೆಯಾಗಲಿ, ವೈದಿಕಜನ್ಯವಾಗಲಿ, ಸಂಸ್ಕೃತಜನ್ಯವಾಗಲಿ ಅಲ್ಲ. ಅಂಗದ ಮೇಲೆ ಲಿಂಗವುಳ್ಳವರೆಲ್ಲ ಲಿಂಗಾಯತರೇ ವಿನಾ ವೀರಶೈವರಲ್ಲ. ಲಿಂಗಧಾರಣೆ ಲಿಂಗಾಯತ ಧರ್ಮದ ಮೂಲ ಸಿದ್ಧಾಂತ ಏಕದೇವೋಪಾಸನೆ ಈ ಧರ್ಮದ ಜೀವಾಳ.

ಬ್ರಿಟಿಷ್ ಸರ್ಕಾರ, ಮುಂಬಯಿ, ಮದ್ರಾಸು, ಮೈಸೂರು, ಕರ್ನಾಟಕ ಸರ್ಕಾರದ ದಾಖಲೆಗಳಲ್ಲಿ ಲಿಂಗಾಯತ ಪದವೇ ಹೆಚ್ಚಾಗಿ ಬಳಸಲ್ಪಟ್ಟಿದೆ ಎನ್ನಲಾಗಿದೆ. ಡೆಪ್ಯೂಟಿ ಚನ್ನಬಸಪ್ಪನವರು 1868ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿಸಿದ ಉಚಿತ ಪ್ರಸಾದ ನಿಲಯ, ಅರಟಾಳ ರುದ್ರಗೌಡರು ಧಾರವಾಡದಲ್ಲಿ 1883ರಲ್ಲಿ ಸ್ಥಾಪಿಸಿದ ವಿದ್ಯಾಭಿವೃದ್ಧಿ ಸಂಸ್ಥೆ, 1905ರಲ್ಲಿ ಮೈಸೂರು ವಿದ್ಯಾನಿಧಿ ಸಂಸ್ಥೆ, ವಾರದ ಮಲ್ಲಪ್ಪನವರು ಸೊಲ್ಲಾಪುರದಲ್ಲಿ 1907ರಲ್ಲಿ ಸ್ಥಾಪಿಸಿದ ಸಂಘ, ಹಳಕಟ್ಟಿಯವರು ಬಿಜಾಪುರದಲ್ಲಿ 1910ರಲ್ಲಿ ಸ್ಥಾಪಿಸಿದ ಬಿಜಾಪುರ ಜಿಲ್ಲ ಶಿಕ್ಷಣ ಸಂಸ್ಥೆ, ಬೆಳಗಾವಿಯ 1916ರ ಕರ್ನಾಟಕ ವಿದ್ಯಾಸಂಸ್ಥೆ ಇನ್ನೂ ಮುಂತಾದ ಸಂಘಸಂಸ್ಥೆಗಳೂ ಧಾರವಾಡದ ಲಿಂಗಾಯತ ಭವನ, ಉತ್ತರ ಕರ್ನಾಟಕದ ಖಾನಾವಳಿ ಇವುಗಳೆಲ್ಲ ಲಿಂಗಾಯತ ಹೆಸರಿನಲ್ಲಿಯೇ ಇವೆ. ಗದುಗಿನ ಡಾ.ಸಿದ್ಧಲಿಂಗಸ್ವಾಮಿಯವರು ವೀರಶೈವ ಅಧ್ಯಯನ ಸಂಸ್ಥೆಯನ್ನು 29-3-2004ರಂದು ಲಿಂಗಾಯತ ಅಧ್ಯಯನ ಸಂಸ್ಥೆ ಎಂದು ಮರುನಾಮಕರಣ ಮಾಡಿರುವುದು ಗಮನಾರ್ಹ. ಎಲ್ಲ ಜಾತಿ ಒಳಪಂಗಡಗಳ ಹೆಸರುಗಳ ಹಿಂದೆ ಲಿಂಗಾಯತ ಪದವಿದೆ. ಜನ ಸಾಮಾನ್ಯರಲ್ಲಿ, ಅವಿದ್ಯಾವಂತರಲ್ಲೂ ಲಿಂಗಾಯತ ಪದವೇ ಹೆಚ್ಚು ಪ್ರಚಲಿತವಿದ್ದು ಅತ್ಯಂತ ಸೂಕ್ತ ಪದ.

ಲಿಂಗಾಯತ ಮತ್ತು ವೀರಶೈವಕ್ಕೆ ವ್ಯತ್ಯಾಸಗಳಿವೆ. ಲಿಂಗಾಯತ ಧರ್ಮ ಬಸವಣ್ಣನವರಿಂದ ಸ್ಥಾಪನೆಯಾದುದು. ಆದರೆ ವೀರಶೈವ ಮತ ಬಸವ ಪೂರ್ವದಲ್ಲೇ ಇದ್ದುದು. ಲಿಂಗಾಯತ ಒಂದು ಪರಿಪೂರ್ಣ ಸ್ವತಂತ್ರ ಧರ್ಮ. ಆದರೆ ವೀರಶೈವ ಒಂದು ವಿಶಿಷ್ಟ ಶೈವ ಪಂಥ. ಲಿಂಗಾಯತ ವೈದಿಕದ ವಿರುದ್ಧ ಹುಟ್ಟಿದ ಧರ್ಮ. ಆದರೆ ವೀರಶೈವ ವೈದಿಕಮೂಲದ

ಮತ. ಲಿಂಗಾಯತ ಒಂದು ದೊಡ್ಡ ಸಮುದ್ರವಿದ್ದಂತೆ. ಆದರೆ ವೀರಶೈವ ಆ ಸಮುದ್ರದಲ್ಲಿ ಸೇರಿಕೊಂಡಿರುವ ಸಣ್ಣನದಿಯಂತೆ. ಲಿಂಗಾಯತ ವರ್ಣಾಶ್ರಮವನ್ನು ನಿರಾಕರಿಸುತ್ತದೆ. ಆದರೆ ವೀರಶೈವವು ವರ್ಣಾಶ್ರಮವನ್ನು ಪಾಲಿಸುತ್ತದೆ. ಲಿಂಗಾಯತ ಧರ್ಮಕ್ಕೆ ವಚನಸಾಹಿತ್ಯ ಆಧಾರ. ಆದರೆ ವೀರಶೈವಕ್ಕೆ ವೇದ, ಆಗಮ ಸಿದ್ಧಾಂತಶಿಖಾಮಣಿ ಆಧಾರ. ಲಿಂಗಾಯತರ ದೇವಮಂತ್ರ ಓಂ ಲಿಂಗಾಯ ನಮಃ. ಆದರೆ ವೀರಶೈವರ ಶಿವಮಂತ್ರ ಓಂ ನಮಃ ಶಿವಾಯ. ಲಿಂಗಾಯತರು ತ್ರಿಮೂರ್ತಿಗಳಿಗೆ ಅತೀತನಾದ ಕರ್ತ ಪರಮಾತ್ಮನ ಪೂಜಕರು. ಆದರೆ ವೀರಶೈವರು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಪೂಜಕರು. ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣನವರು ಐತಿಹಾಸಿಕ ಮಹಾಪುರುಷರು. ಆದರೆ ರೇಣುಕಾದಿ ಪಂಚಾಚಾರ್ಯರು ಯುಗಯುಗಳಲ್ಲಿ ಲಿಂಗದಲ್ಲಿ ಉದ್ಭವರಾದವರು ಎಂಬುದು ಅವೈಜ್ಞಾನಿಕ ಮತ್ತು ನಂಬಲನರ್ಹ.

ಹೀಗೆ ವೀರಶೈವ - ಲಿಂಗಾಯತಕ್ಕೆ ಮೂಲಭೂತ ವ್ಯತ್ಯಾಸಗಳಿರುವುದರಿಂದ ಅವು ಸ್ಪಷ್ಟವಾಗಿ ಬೇರೆ ಬೇರೆ ಎಂಬುದು ಸ್ವತಃಸಿದ್ಧವಾಗುತ್ತದೆ. ಆದ್ದರಿಂದ ವೀರಶೈವ ಮತ್ತು ಲಿಂಗಾಯತ ಇವೆರಡೂ ಒಂದೇ ಎಂದು ಆಗಾಗ್ಗೆ ಹೇಳಿಕೆ ಕೊಟ್ಟು ಜನರಿಗೆ ದಾರಿತಪ್ಪಿಸುವ ಪ್ರಯತ್ನ ಇನ್ನಾದರೂ ಮಾಡಬಾರದು. ವೀರಶೈವ -ಲಿಂಗಾಯತ ಎರಡೂ ಒಂದೇ ಎಂಬ ಭ್ರಮೆ ತೊಲಗುವುದು ಅಗತ್ಯ.

ಹನ್ನೆರಡನೆಯ ಶತಮಾನದ ಬಸವಣ್ಣನವರು ಶೈವರಾಗಿದ್ದವರು ವೀರಶೈವರಾದರೆಂಬುದು ಸರಿಯಲ್ಲ. ಮೊದಲು ಬಸವಣ್ಣನವರು ಶೈವಬ್ರಾಹ್ಮಣರಾಗಿದ್ದು, ನಂತರ ಲಿಂಗಾಯತ ಧರ್ಮ ಸ್ಥಾಪಿಸಿ, ಇಷ್ಟಲಿಂಗವನ್ನು ಕಂಡುಹಿಡಿದರು. ಅದನ್ನು ಮೊದಲು ತಾವು ಧರಿಸಿ, ಜಗತ್ತಿನ ಮೊತ್ತಮೊದಲ ಲಿಂಗಾಯತರಾಗಿ ನಂತರ ಅದನ್ನು ಎಲ್ಲರಿಗೂ ಕೊಟ್ಟರು. ಅಲ್ಲಿಗೆ ಅವರೆಲ್ಲರ ಪೂರ್ವಜಾತಿ ಅಳಿದು, ಪುನರ್ಜಾತರಾಗಿ ಲಿಂಗಾಯತರಾದರು.

ಲಿಂಗಾಯತ ಧರ್ಮವು ಜೈನ, ಬೌದ್ಧ, ಸಿಖ್ಖ, ಕ್ರೈಸ್ತ, ಇಸ್ಲಾಂ ಧರ್ಮಗಳಂತೆ ಸ್ವತಂತ್ರ ಧರ್ಮವೆಂದು ಜನರು ತಿಳಿದಿದ್ದಾರೆ. ಆದರೆ ಡಾ.ಚಿದಾನಂದ ಮೂರ್ತಿಯವರು ವೀರಶೈವವು ಹಿಂದೂ ಧರ್ಮದ ಶಾಖೆ ಅಂದರೆ ವೀರಶೈವರು ಹಿಂದುಗಳೆಂದು ಹೇಳಿದ್ದಾರೆ ? ಹಿಂದೂ ಧರ್ಮವೆಂದರೆ ಅದು ಯಾರ ಧರ್ಮ ? ಸಾಮಾನ್ಯವಾಗಿ ವೈದಿಕಧರ್ಮ ವರ್ಣಾಶ್ರಮ ಧರ್ಮವನ್ನು ಅನುಸರಿಸುವವರಿಗೆ ಹಿಂದೂಗಳೆಂದು ಕರೆಯಲಾಗುತ್ತಿದೆ. ಆದರೆ ವೀರಶೈವ ಮಹಾಸಭೆಯು ವೀರಶೈವರು ಹಿಂದುಗಳಲ್ಲವೆಂದು ನಿರ್ಣಯಿಸಿದೆ. ಇದಕ್ಕೆ ಡಾ|| ಚಿದಾನಂದ ಮೂರ್ತಿಯವರ ಉತ್ತರವೇನು ? ಡಾ|| ಚಿದಾನಂದ ಮೂರ್ತಿಯವರು ವೀರಶೈವರನ್ನು ಹಿಂದುಗಳೆಂದು ಹೇಳಿರುವುದರಿಂದ ಅವರು ವೈದಿಕ ವರ್ಣಾಶ್ರಮ ಧರ್ಮಕ್ಕೆ ಸೇರಿದವರೆಂದಾಯಿತು. ಹಿಂದೂ ಸಮಾಜಶಾಸ್ತ್ರವು ವರ್ಣಾಶ್ರಮ ಪದ್ಧತಿಯನ್ನು ಮನ್ನಿಸುತ್ತದೆ. ಅಂದಾಗ ಇಷ್ಟಲಿಂಗಧಾರಿ ಲಿಂಗಾಯತರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅಂತ್ಯಜರೆಂಬ ವರ್ಗೀಕರಣದ ಶೂದ್ರ ಸ್ಥಾನದಲ್ಲಿ ಅನಿವಾರ್ಯವಾಗಿ ಸೇರಬೇಕಾಗುತ್ತದೆ. ಆದರಿಂದ ಡಾ||ಚಿದಾನಂದ ಮೂರ್ತಿಯವರು ಈ ವರ್ಣಾಶ್ರಮಗಳಲ್ಲಿ ಯಾವ ವರ್ಣಕ್ಕೆ ಸೇರಿದವರು ಎಂಬುದನ್ನು ಸ್ಪಷ್ಟಪಡಿಸಬೇಕು.

ಕೂಡಲ ಸಂಗಮದಲ್ಲಿ ಲಿಂಗಾಯತ ಧರ್ಮ ಮಹಾಸಭೆಯ ಪದಾಧಿಕಾರಿಗಳ ಸಭೆ

ದೇವ (ಭಾನು)ವಾರ, ದಿ. 17-7-2011ರಂದು

ಶರಣ ಮೇಳದಲ್ಲಿ ಲಿಂಗಾಯತ ಧರ್ಮ ಮಹಾಸಭೆ ಮತ್ತು ರಾಷ್ಟ್ರೀಯ ಬಸವ ದಳಗಳ ಅಧಿವೇಶನವನ್ನು ನಡೆಸಲಾಗುವುದಾದರೂ ಸದಸ್ಯರಿಗೆ ತಮ್ಮ ತಮ್ಮ ಸಮಸ್ಯೆ, ಅಭಿಪ್ರಾಯ ತಿಳಿಸಲು ಸಮಯವು ಸಾಕಾಗುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ಸಭೆಯನ್ನು ಕರೆಯಬೇಕೆಂದು ಬಹಳ ಜನರು ಆಗ್ರಹಿಸುತ್ತಿದ್ದರು.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ, ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದಲ್ಲಿ ದೇವ(ಭಾನು)ವಾರ ದಿ.17-7-2011ರಂದು ಪ್ರಸ್ತುತ ಸಭೆಯನ್ನು ಏರ್ಪಡಿಸಲಾಗಿದೆ. ಇದರಲ್ಲಿ ಲಿಂಗಾಯತ ಧರ್ಮ ಮಹಾಸಭೆಯ ವಿವಿಧ ಘಟಕಗಳ ಪ್ರಮುಖ ಪದಾಧಿಕಾರಿಗಳು, ರಾಷ್ಟ್ರೀಯ ಬಸವ ದಳಗಳ ಪ್ರಮುಖ ಪದಾಧಿಕಾರಿಗಳು ಬಂದು ಭಾಗವಹಿಸಲೇಬೇಕು.

ದಿ.17ರಂದು ಬೆಳಿಗ್ಗೆ10-30ರಿಂದ ಸಭೆ; ಎರಡನೆಯ ಗೋಷ್ಠಿ 3-30ರಿಂದ. ಸಾಮೂಹಿಕ ಪ್ರಾರ್ಥನೆ ನಂತರ ಚಿಂತನೆ, ಸದಸ್ಯರು ಬರುವಾಗ ತಮ್ಮೊಂದಿಗೆ ತರಬೇಕಾದ ವಿವಿರ.

1. ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾದ ವಿವಿಧ ಘಟಕಗಳ ಕಾರ್ಯಕಾರಿ ಸಮಿತಿಯ ಸದಸ್ಯರ ಯಾದಿ.
2. ಕಟ್ಟಡ ನಿರ್ಮಾಣ ಮಾಡುತ್ತಿದ್ದರೆ ಅದರ ನಕ್ಷೆ, ಯೋಜನೆ ಅಂದಾಜು ವೆಚ್ಚದ ಪಟ್ಟಿ.
3. ಅವರು ಮಂಡಿಸುವ, ಚರ್ಚಿಸುವ ವಿವರಗಳು, ಲಿಖಿತ ರೂಪದಲ್ಲಿ ಇರಬೇಕು.

ಚರ್ಚಿಸಲಿರುವ ವಿಷಯಗಳು

1. ಲಿಂಗಾಯತ ಧರ್ಮದ ಸಂವಿಧಾನಾತ್ಮಕ ಮಾನ್ಯತೆಗಾಗಿ ಮಾಡಬೇಕಾದ ಕೆಲಸ.
2. ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಧರ್ಮ ಮಹಾಸಭಾ ಘಟಕಗಳ ಸಂಘಟನೆ, ಪುನಶ್ಚೇತನ, ಹೊಸ ಶಾಖೆಗಳ ಪ್ರಾರಂಭ.
3. ನೀತಿ -ನಿಯಮಾವಳಿಯ ರಚನೆ.
4. ಪದಾಧಿಕಾರಿಗಳ ಆಯ್ಕೆ.
5. 2012ನೆಯ ಸಾಲಿನ ಶರಣ ಮೇಳ 25ನೆಯ ಶರಣ ಮೇಳವಾಗಲಿರುವ ಕಾರಣ ರಜತ ಮಹೋತ್ಸವವನ್ನು ವಿಶೇಷವಾಗಿ ಆಚರಿಸುವ ಬಗ್ಗೆ ಚಿಂತನೆ.
6. ಪ್ರತಿನಿಧಿಗಳು ಎತ್ತಬಹುದಾದ ಪ್ರಶ್ನೆಗಳು.

ಹೆಚ್ಚಿನ ಸಂಖ್ಯೆಯಲ್ಲಿ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು ಮತ್ತು ಆಸಕ್ತ ಶರಣರು ಭಾಗವಹಿಸ ಬೇಕೆಂದು ಕೋರುತ್ತೇವೆ.

ಶರಣ.ಕೆ.ಬಸವರಾಜು
ಕಾರ್ಯಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭೆ

ಶರಣ.ವೀರಣ್ಣ ಲಿಂಗಾಯತ್(ಕೊರ್ಲ್ಹಳ್ಳಿ)
ಕಾರ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ

॥ ಪುಣೆ (ಪುಣ್ಯ) ನಗರವನ್ನು ಪುಳಕಿತಗೊಳಿಸಿದ 10ನೇ ಲಿಂಗಾಯತ ಧರ್ಮ ಸಮ್ಮೇಳನ ॥

– ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಪುಣೆ ಮಹಾರಾಷ್ಟ್ರ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಅಥವಾ ಮರಾಠಿಯಲ್ಲಿ ಹೇಳುವಂತೆ: ವಿದ್ಯಾಚೆ ಮಾಹೆರ್ ಘರ್ (ಜ್ಞಾನದ ತವರು ಮನೆ) ಎನಿಸಿರುವ ಪುಣೆ (ಪೂನಾ) ಮಹಾನಗರ ನಿಜವಾಗಿಯೂ ಸಾಂಸ್ಕೃತಿಕ ನಗರವಾಗಿದೆ. ಪೂಜ್ಯ ಜ್ಞಾನೇಶ್ವರ ಮತ್ತು ಪೂಜ್ಯ ಸಂತ ತುಕಾರಾಮರ ಪಾದಸ್ಪರ್ಶದಿಂದ ಪಾವನವಾಗಿರುವ ಪುಣೆಗೆ ಮೊದಲು ಪವನಾ ನದಿಯಿಂದಾಗಿ ಪೂನಾ ಎಂಬ ಹೆಸರು ಬಂದಂತಿದೆ. ಪವನಾ ನದಿಯು ಪೂನಾ ನಗರದ ತುಂಬೆಲ್ಲ ಸುತ್ತಿದೆ. ಇನ್ನೊಂದೆಡೆ ಇಂದ್ರಾಮಣಿ ನದಿ ಹರಿದಿದೆ. ಸಂತ ಜ್ಞಾನೇಶ್ವರ ಹಾಗೂ ಸಂತ ತುಕಾರಾಮರ ಸಮಾಧಿಗಳಿರುವ ದೇಹು ಮತ್ತು ಆಳಂದಿ ಕ್ಷೇತ್ರಗಳು ನಗರದ ಹೊರವಲಯದಲ್ಲಿದ್ದು, ನಗರಕ್ಕೆ ಕೇವಲ 15 ರಿಂದ 20 ಕಿ.ಮೀ. ದೂರದಲ್ಲಿದೆ. ಇಂದ್ರಾಯಿಣಿ ನದಿಯ ತೀರದಲ್ಲಿರುವ ಈ ಕ್ಷೇತ್ರಗಳು ದಕ್ಷಿಣ ಭಾರತದ ಸಹಸ್ರಾರು ಭಕ್ತರನ್ನು ಪ್ರತಿನಿತ್ಯವೂ ಆಕರ್ಷಿಸುತ್ತಿವೆ. ಜ್ಞಾನೇಶ್ವರರು ಮತ್ತು ತುಕಾರಾಮರ ಪಾದಸ್ಪರ್ಶದಿಂದ ಪಾವನವಾದ ಪವನಾ(ಪೂನಾ) ನಗರವು ಅಂದಿನಿಂದಲೂ ಪುಣ್ಯನಗರವೆಂದೇ ಖ್ಯಾತಿವೆತ್ತಿದೆ. ಅದಕ್ಕಾಗಿಯೇ ಪೂನಾ ನಗರವನ್ನು ಪುಣೆ ಎಂದು ಕರೆಯಲಾಗಿದೆ ಎಂಬುದು ನನ್ನ ಭಾವನೆ.

ಅದೇನೇ ಇರಲಿ ಇದೇ ಜೂನ್ 4, 5 ಮತ್ತು 6 ರಂದು ಪುಣೆ ನಗರದ ಪಿಂಪ್ರಿ–ಚಿಂಚವಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಾಲ್ಹೇಕರವಾಡಿಯ ಆಹೇರ್ ಗಾರ್ಡನ್‌ನಲ್ಲಿ ಅಖಿಲಭಾರತ 10ನೇ ಲಿಂಗಾಯತ ಧರ್ಮ ಸಮಮೇಳನವು ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆಮಹಾದೇವಿಯವರ ದಿವ್ಯ ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ನಿಜವಾಗಿಯೂ ಈ ಸಮ್ಮೇಳನದಲ್ಲಿ ಭಾಗವಹಿಸಿದವರೆಲ್ಲರೂ ಪುಣ್ಯವಂತರೆ...

ದಿ. 4 ರಂದು ಶರಣ(ಶನಿ)ವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಸಮ್ಮೇಳನದ ಉದ್ಘಾಟನೆ ಜರುಗಿತು. ಪೂನಾ ಮಹಾನಗರದಲ್ಲಿ ಎರಡು ಮಹಾನಗರ ಪಾಲಿಕೆಗಳಿವೆ. ಒಂದು ಪೂನಾ ಮಹಾನಗರ ಪಾಲಿಕೆ ಇನ್ನೊಂದು ಪೆಂಪ್ರಿ–ಚಿಂಚವಡ ಮಹಾನಗರ ಪಾಲಿಕೆ. ಸಮ್ಮೇಳನದ ಉದ್ಘಾಟನೆಯನ್ನು ಪಿಂಪ್ರಿ–ಚಿಂಚವಡ ಮಹಾನಗರದ ಮಹಾಪೌರರಾದ ಶ್ರೀ ಯೋಗೇಶ್ ಬಹಲ್ ಅವರು ನೇರವೇರಿಸಿದರು.

ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ಶ್ರೀ ಬಹಲ್ ಅವರು ಮಾತನಾಡಿ ಪೂಜ್ಯ ಮಾತೆಮಹಾದೇವಿ ತಾಯಿಯವರು ಈ ಚಿಂಚವಡ ಭಾಗದಲ್ಲಿ ಇಂಥ ಪವಿತ್ರವಾದ ಭವ್ಯವಾದ ಕಾರ್ಯಕ್ರಮ ಏರ್ಪಡಿಸಿ ನಮ್ಮನ್ನು ಧನ್ಯರನ್ನಾಗಿಸಿದ್ದಾರೆ ಎಂದರಲ್ಲದೆ, ಮಹಾನಗರ ಪಾಲಿಕೆ ವತಿಯಿಂದ ಕೃತಜ್ಞತೆ ಸಲ್ಲಿಸಿದರು. ಪುಣೆ ಹಾಗೂ ಪಿಂಪ್ರಿ–ಚಿಂಚವಡನಲ್ಲಿ ಪ್ರತಿವರ್ಷವು ಮಹಾನಗರ ಪಾಲಿಕೆ ವತಿಯಿಂದ ಲಕ್ಷಾಂತರ ರೂ. ಅನುದಾನ ನೀಡಿ ಬಸವ ಜಯಂತಿ ಆಚರಿಸಲಾಗುತ್ತಿದೆ. ಅರ್ಥಪೂರ್ಣವಾಗಿ

ಕಾರ್ಯಕ್ರಮಗಳನ್ನು ನಡೆಸಿ ಮಹಾತ್ಮ ಬಸವೇಶ್ವರ ತತ್ತ್ವಗಳನ್ನು ಪ್ರಚಾರ ಮಾಡಬೇಕಾಗಿದೆ. ಇಂಥ ಕಾರ್ಯಕ್ರಮಗಿಗೆ ಯಾವತ್ತೂ ತಮ್ಮ ಸಹಕಾರ–ಬೆಂಬಲವಿದೆ ಎಂದು ಶ್ರೀ ಬಹಲ್ ಅವರು ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ನಗರಪಾಲಿಕೆ ಸದಸ್ಯೆ ಹಾಗೂ ಬ ಪ್ರಭಾಗ ಅಧ್ಯಕ್ಷರಾದ ಆಶಾ ತಾಯಿ ಸೂರ್ಯವಂಶಿಯವರು ಮಾತನಾಡಿ, ನಾವು ಸಮತಾವಾದದ ವಿಚಾರ ಹೇಳುವಾಗ ಶಾಹುಮಹಾರಾಜ್, ಜ್ಯೋತಿಬಾ ಪುಲೆ ಮತ್ತು ಡಾ॥ ಅಂಬೇಡ್ಕರ್‌ರ ಹೆಸರನ್ನು ಹೇಳುತ್ತೇವೆ. ಈ ಸಮತಾವಾದದ ಮೂಲ ಪುರುಷ ಮಹಾತ್ಮ ಬಸವೇಶ್ವರರು, ದೀನ–ದಲಿತರು ಹಿಂದುಳಿದ ವರ್ಗದ ಜನರ ಮನೆ–ಮನಗಳಿಗೆ ಬಸವೇಶ್ವರರು ಮಾಡಿರುವ ಕಾರ್ಯ ಮತ್ತು ಕ್ರಾಂತಿಯ ವಿಚಾರಗಳನ್ನು ನಾವೆಲ್ಲ ಸೇರಿ ತಲುಪಿಸಬೇಕಾಗಿದೆ. ಈ ಕಾರ್ಯಕ್ಕಾಗಿ ಪುನಾ ನಗರದಲ್ಲಿ ನಮ್ಮೆಲ್ಲರ ಸಹಕಾರ ಸದಾ ತಮ್ಮೊಂದಿಗಿರುತ್ತದೆ ಎಂದು ರಾಷ್ಟ್ರೀಯ ಬಸವ ದಳಕ್ಕೆ ಭರವಸೆ ನೀಡಿದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಾಜಿ ನಗರ ಪಾಲಿಕೆ ಸದಸ್ಯ ಶರಣ ನಾರಾಯಣ ಬಹಿರವಡೆಯವರು ಅತಿಥಿ ಹಾಗೂ ಗಣ್ಯರನ್ನು ಸ್ವಾಗತಿಸಿದರು. ಶರಣ ಶಶಿಕಿರಣ ಗೌಳಿ ಶರಣು ಸಮರ್ಪಣೆ ಮಾಡಿದರು.

ಅಲ್ಲಮಗಿರಿ ಅಲ್ಲಮ ಪ್ರಭು ಮಠದ ಪೂಜ್ಯ ಶ್ರೀ ಬಸವಲಿಂಗ ಸ್ವಾಮೀಜಿ ಧರ್ಮ ಧ್ವಜಾರೋಹಣ ಮಾಡಿದರು. ಶರಣೆ. ಸುಮಂಗಲಾ ಮತ್ತು ಬಸವನಗೌಡ ಪಾಟೀಲ ನಿಗಡಿ ಅವರು ಧರ್ಮಗುರುವಿನ ಪೂಜೆ ನೆರವೇರಿಸಿದರು.

ಮುಂಬೈನ ಆರ್.ಬಿ. ಹೆಬ್ಬಳ್ಳಿ, ಪುಣೆಯ ಚಂದ್ರಕಾಂತಾ ಸೋನಕಾಂಬಳೆ ಉದ್ಯಮಿಗಳಾದ ಸಂತೋಷ ಆಹೇರ್, ಅಮರ ಆಹೇರ್, ರಾಜೇಂದ್ರ ಸಾಳುಖೆ ಬಾಬಾ ಬಾಗಲ್ ಅವರು ಉಪಸ್ಥಿತರಿದ್ದರು. ಬಸವರಾಜ ಕರಾಜೆ ಕಾರ್ಯಕ್ರಮ ನಿರೂಪಿಸಿದರು. ಪೂಜ್ಯ ಮಹಾಜಗದ್ಗುರು ಮಾತಾಜಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಮ್ಮೇಳನ ಮಾಡುವ ಉದ್ದೇಶ ಹಾಗೂ ಬಸವ ಧರ್ಮ ಪೀಠದ ಕಾರ್ಯಯೋಜನೆಗಳ ಬಗ್ಗೆ ವಿವರಿಸಿದರು.

ಅಂದು ಸಂಜೆ 4.00 ಗಂಟೆಗೆ ನಡೆದ ಧರ್ಮಚಿಂತನಗೋಷ್ಠಿ 1ನ್ನು ಉದ್ಯಮಿ ಬಸವಲಿಂಗ ಕುಲ್ಡೋಳಿ ನೆರವೇರಿಸಿದರು. ಆಂಧ್ರಪ್ರದೇಶ ರಾ.ಬ.ದಳ ಅಧ್ಯಕ್ಷ ಶರಣ ಧನರಾಜ ಜೀರ್ಗೆಯವರು ಬಸವ ಧ್ವಜಾರೋಹಣ ಮಾಡಿ ಮಾತನಾಡುತ್ತ ಬಸವ ಧರ್ಮಪೀಠ ಸಂಸ್ಥೆ ಮಾತ್ರ ಲಿಂಗಾಯತ ಧರ್ಮದ ಪ್ರಚಾರಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದೆ. ಪೂಜ್ಯ ಮಾತಾಜಿಯವರು ಲಿಂಗಾಯತ ಧರ್ಮದ ಮಾನ್ಯತೆಗಾಗಿ ಅಹೋರಾತಿ ಶ್ರಮಿಸುತ್ತಿದ್ದಾರೆ ಎಂದು ನುಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆಯವರು ಪ್ರವಚನ ನೀಡಿ. ದೇವರ ಸ್ವರೂಪವನ್ನು ವಿವರಿಸುತ್ತ ದೇವರು ನಿರಾಕಾರ, ನಿರ್ಗುಣ ಮತ್ತು ನಿರಂಜನನಾಗಿದ್ದಾನೆ. ಬ್ರಹ್ಮಾಂಡದ ತುಂಬೆಲ್ಲ ಓತಪ್ರೇತವಾಗಿ ತುಂಬಿಕೊಂಡಿರುವ ಲಿಂಗದೇವನು ಪಿಂಡಾಂಡ (ಜೀವಿಗಳ ದೇಹ)ದಲ್ಲಿಯೂ ಆತ್ಮದ ಸ್ವರೂಪದಲ್ಲಿ ನೆಲೆಸಿದ್ದಾನೆ. ಸಕಲ ಜೀವರಾಶಿಗಳಲ್ಲಿಯೂ ಪರಮಾತ್ಮನಿದ್ದಾನೆ. ಅದಕ್ಕಾಗಿಯೇ ಧರ್ಮಗುರು

ಬಸವಣ್ಣನವರು "ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವನೆ ಶರಣ" ಎಂದಿದ್ದಾರೆ. ದೇವರು ಸೃಷ್ಟಿಯ ಎಲ್ಲೆಡೆ ಇದ್ದರೂ ಅವನು ಪ್ರಕಟವಾಗುವುದು ಮಾತ್ರ ನಿಜವಾದ ಭಕ್ತಿ ತುಂಬಿದ ಸದ್‌ಭಕ್ತನ ಹೃದಯ ಕಮಲದಲ್ಲಿ. ಆ ದೇವನನ್ನು ಕಾಣಬೇಕಾದರೆ ಇಷ್ಟಲಿಂಗ ಯೋಗಸಾಧನೆ ಅತ್ಯಂತ ಸುಲಭವಾದ ಮಾರ್ಗ. ಇದನ್ನು ವಿಶ್ವಗುರು ಬಸವಣ್ಣನವರು ನಮಗೆ ಕೊಟ್ಟಿದ್ದಾರೆ. ಕನ್ನಡಿಯಿಲ್ಲದಿದ್ದರೆ ತನ್ನ ಮುಖ ಹೇಗೆ ಕಾಣುವುದಿಲ್ಲವೋ ಹಾಗೆಯೇ ಇಷ್ಟಲಿಂಗ ದರ್ಪಣದ ಸಹಾಯದಿಂದ ಮಾತ್ರ ಆತ್ಮಸಾಕ್ಷಾತ್ಕಾರ ಸಾಧ್ಯ ಎಂದು ಪೂಜ್ಯ ಮಾತಾಜಿ ನುಡಿದರು.

ತಮಿಳುನಾಡು ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಸಿ.ಆರ್. ಆರಮುಗಮ್ ಅಧ್ಯಕ್ಷತೆ ವಹಿಸಿದ್ದರು. ಪ್ರಾ. ರಾಜಾ ಮಾಳಗಿ ವಾಳವಾ ಅವರು ಉಪನ್ಯಾಸ ನೀಡಿ ವಿಶ್ವಗುರು ಬಸವಣ್ಣನವರು ಕೊಟ್ಟಿರುವ ಕಾಯಕ ಮತ್ತು ದಾಸೋಹ ತತ್ತ್ವ ಅತ್ಯಂತ ಉಪಯುಕ್ತವಾಗಿದೆ. ಲಿಂಗಾಯತ ಧರ್ಮ ದುಡಿಯುವವರ ಧರ್ಮ. ಸೋಮಾರಿಗಳ ಧರ್ಮವಲ್ಲ. ಪ್ರಾಮಾಣಿಕರ ಧರ್ಮ. ಇದು ಅಪ್ರಾಮಾಣಿಕರ ಧರ್ಮವಲ್ಲ, ಸತ್ಯಶುದ್ಧ ಕಾಯಕದಿಂದ ಧನವನ್ನು ಸಂಪಾದಿಸಿ ದಾಸೋಹ ತತ್ವದ ಮೂಲಕ ಸಮಾಜದ ಏಳಿಗೆಗಾಗಿ ಖರ್ಚು ಮಾಡಲು ಬೋಧಿಸುವ ಧರ್ಮ ಎಂದು ವಿವರಿಸಿದರು.

ಬೆಂಗಳೂರು ಬಸವ ಮಂಟಪದ ಪೂಜ್ಯ ಮಾತೆ ಜ್ಞಾನೇಶ್ವರಿ ಹಾಗೂ ಧಾರವಾಡದ ಅಕ್ಕಮಹಾದೇವಿ ಮಠದ ಪೂಜ್ಯ ಮಾತೆ ಸತ್ಯಾದೇವಿಯವರು ಧರ್ಮಗುರುವಿನ ಪೂಜೆ ನೆರವೇರಿಸಿದರು.

ಹೈದ್ರಾಬಾದ್ ಬಸವ ಮಂಟಪದ ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮೀಜಿ, ಕರ್ನಾಟಕ ರಾಜ್ಯ ರಾ.ಬ.ದಳ ಅಧ್ಯಕ್ಷ ವೀರಣ್ಣ ಲಿಂಗಾಯತ, ಗಣನಾಯಕಿಯರಾದ ಲಕ್ಷ್ಮೀಬಾಯಿ ಪಾಂಡ್ರೆ, ಉದಗೀರ, ದೇವಿಕಾ ಶರಣಪ್ಪ ಬೆಂಗಳೂರು, ಶಿವರಾಜ ಪಾಟೀಲ ಅತಿವಾಳ, ಕುಶಲರಾವ್ ಪಾಟೀಲ ಬೀದರ, ಶಿವರಾಜ ಖಂಡ್ರೆ ನಾಂದೇಡ ಅವರು ಉಪಸ್ಥಿತರಿದ್ದರು.

ವಿಶ್ವದಲ್ಲಿ ಶಾಂತಿ ನೆಲೆಸಲಿ, ಎಲ್ಲೆಡೆ ಬಸವ ಜ್ಯೋತಿ ಬೆಳಗಲಿ, ವಿಶ್ವಪ್ರೇಮ ಹೊನಲಾಗಿ ಹರಿಯಲಿ ಎಂದು ಸಂಕಲ್ಪ ಮಾಡಿಕೊಂಡು ಪೂಜ್ಯ ಮಾತಾಜಿಯವರ ದಿವ್ಯ ಸಾನ್ನಿಧ್ಯದಲ್ಲಿ ದಿ. 5 ರಂದು ದೇವವಾರ ಬೆಳಿಗ್ಗೆ 10 ಗಂಟೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ ಜರುಗಿತು. ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ, ಪೂಜ್ಯರಾದ ಬಸವಲಿಂಗ ಸ್ವಾಮೀಜಿ, ಸಿದ್ದೇಶ್ವರ ಸ್ವಾಮೀಜಿ ಹತ್ತರಕಿ, ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ, ಮಾತೆ ಜ್ಞಾನೇಶ್ವರಿ, ಮಾತೆ ಸತ್ಯಾದೇವಿ, ಮಾತೆ ದಾನೇಶ್ವರಿಯವರು ಇಷ್ಟಲಿಂಗ ಪೂಜೆಯಲ್ಲಿ ಪಾಲ್ಗೊಂಡರು.

ಶರಣ ಬಸವರಾಜ ಹಾಗೂ ಚನ್ನಬಸವ ಚೌಧರಿಯವರು ಧರ್ಮಗುರು ಪೂಜೆ ನೆರವೇರಿಸಿದರು. ಗಡಹಿಂಗ್ಲಜ್‌ನ ಮಹದೇವ ಮುಸಳೆ ಅಧ್ಯಕ್ಷತೆ ವಹಿಸಿದ್ದರು. ವಾಳವಾದ ಸುರೇಶ ಶೇಟೆ, ಶಿವಾಜಿ ಸಾಖರೆ, ಶಿವಕುಮಾರ ಆಗ್ರೆ ಭೋಸರಿ, ರಾಮನಾಯಿಕ ಪುಣೆ, ಶರಣ ಅಶೋಕ ಪುಣೆ ಕುಬಸದ ಮತ್ತು ರಾಜು ಐನಾಪುರೆ ಅವರು ಉಪಸ್ಥಿತರಿದ್ದರು.

ಅಂದು ಸಂಜೆ 4 ಗಂಟೆಗೆ 2ನೆಯ ಧರ್ಮಚಿಂತನ ಗೋಷ್ಠಿ ನಡೆಯಿತು. ಲಿಂಗಾಯತ ಧರ್ಮ ಸ್ವತಂತ್ರ ಧರ್ಮಚಿಂತನೆ ಗೋಷ್ಠಿ ನಡೆಯಿತು. ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಈ ಕುರಿತು ಉಪನ್ಯಾಸ ನಡೆದವು. ಪೂಜ್ಯ ಪ್ರಭುಲಿಂಗ ಸ್ವಾಮೀಜಿ ಬಸವ

ಮಂಟಪ ಹೈದ್ರಾಬಾದ್ ಅವರು ಧ್ವಜಾರೋಹಣ ಮಾಡಿದರು. ಶರಣೆ ರಾಜೇಶ್ವರಿ ಹೆಗಡಿ ಮತ್ತು ಡಾ॥ ಸಾವಿತ್ರಿ ಹಕ್ಕಾಪಕ್ಕಿ ಅವರು ಗುರುಪೂಜೆ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಬೀದರಿನ ಶರಣ ಬಸವಕುಮಾರ ಪಾಟೀಲ, ಲಿಂಗಾಯತ ಸಮಾಜ ಅಧ್ಯಕ್ಷ ಕುಶಲರಾವ್ ಪಾಟೀಲ್, ರವಿಕಾಂತ ಬಿರಾದಾರ ಗುಲಬರ್ಗಾ ಆರ್.ಜಿ. ಶೆಟಕಾರ, ಬಸವಂತರಾವ್ ಏರಿ ಆಗಮಿಸಿದ್ದರು.

ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಅಧ್ಯಕ್ಷರಾದ ಶರಣ ಕೆ. ಬಸವರಾಜ, ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಧನರಾಜ ಜೇರಗೆ, ಸಮ್ಮೇಳನದ ಸಂಯೋಜನ ಸಮಿತಿಯ ಸದಸ್ಯ ಬಸವರಾಜ ಕಣಜೆ ಮುಂತಾದ ಕಾರ್ಯಕರ್ತರು ಚಿಂತನಗೋಷ್ಠಿಯಲ್ಲಿ ತಮ್ಮ ವಿಚಾರ ಮಂಡಿಸಿದರು.

ದಿ. 6 ರಂದು ಶಿವ (ಸೋಮ) ವಾರ ಬೆಳಿಗ್ಗೆ 10 ಗಂಟೆಗೆ ರಾಷ್ಟ್ರೀಯ ಬಸವದಳದ ಅಧಿವೇಶನ ಹಾಗೂ ಸಮ್ಮೇಳನದ ಸಮಾರೋಪ ಸಮಾರಂಭ ಜರುಗಿತು. ವೀರಶೈವ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಅಧ್ಯಕ್ಷ ಕಾಕಾಸಾಬ್ ಕೊಯಟೆ ಬಸವ ಧ್ವಜಾರೋಹಣ ಮಾಡಿ ಮಾತನಾಡುತ್ತ ಮಹಾರಾಷ್ಟ್ರದಲ್ಲಿ ಲಿಂಗಾಯತ ಸಮಾಜ ಬಹುದೊಡ್ಡ ಪ್ರಮಾಣದಲ್ಲಿದ್ದರೂ, ಬಸವ ತತ್ತ್ವ ಪ್ರಚಾರದ ಕೊರತೆಯಿದೆ. ಹಳ್ಳಿ ಹಳ್ಳಿಗಳಿಗೂ ಬಸವ ತತ್ತ್ವ, ವಚನಸಾಹಿತ್ಯವನ್ನು ತಲುಪಿಸುವ ಕಾರ್ಯ ನಡೆಯಬೇಕಾಗಿದೆ. ಇಲ್ಲಿಯವರೆಗೆ ಯಾರೂ ನಮಗೆ ತಿಳುವಳಿಕೆ ನೀಡುವವರಿರಲಿಲ್ಲವಾದ್ದರಿಂದ ನಮಗೆ ವೀರಶೈವ–ಲಿಂಗಾಯತ ವ್ಯತ್ಯಾಸ ಗೊತ್ತಾಗಲಿಲ್ಲ. ಅದಕ್ಕಾಗಿ ಇಲ್ಲಿವರೆಗೆ ವೀರಶೈವ ಪದ ಬಳಸುತ್ತ ಬಂದಿದ್ದೇವೆ. ತಾವು ಕ್ಷಮಿಸಬೇಕು ಎಂದು ಅತ್ಯಂತ ವಿನಯದಿಂದ ಕ್ಷಮೆಯಾಚಿಸಿದರಲ್ಲದೆ, ಪೂಜ್ಯ ಮಾತಾಜಿಯವರು ಮಹಾರಾಷ್ಟ್ರಕ್ಕೆ ಪಾದಾರ್ಪಣೆ ಮಾಡಿದ್ದು, ನಮಗೆಲ್ಲ ಹರ್ಷ ಉಂಟುಮಾಡಿದೆ ಎಂದರು.

ಲಿಂಗಾಯತ ಸಮಾಜದ ಶ್ರೇಷ್ಠ ಉದ್ಯಮಿಗಳಾದ ಶರಣ ಧರ್ಮರಾಜ ಖೇಣಿಯವರು ಸಮಾವೇಶದ ಉದ್ಘಾಟನೆ ನೆರವೇರಿಸಿ, ಲಿಂಗಾಯತ ಧರ್ಮದ ಪ್ರಚಾರ ಮಾಡುತ್ತಿರುವ ಪೂಜ್ಯ ಮಾತಾಜಿಯವರಿಗೆ ಸದಾ ತಮ್ಮ ಸಹಕಾರವಿರುತ್ತದೆ ಎಂದು ಭರವಸೆ ನೀಡಿದರು.

ಶರಣ ಅಶೋಕ ಕುಬಸದ ಮತ್ತು ಪರಿವಾರದವರು ಧರ್ಮಗುರು ಪೂಜೆ ನೆರವೇರಿಸಿದರು. ಡಾ॥ ಎಸ್.ಬಿ. ಪಾಟೀಲ ಸಂಕೇಶ್ವರ, ಶಂಖರ ವಡೇರ, ಎಂ.ಆರ್. ನೇವಡೆ ಗಡಹಿಂಗ್ಲಜ್, ಶಂಕರಗೌಡ ದೇಸಾಯಿ, ಸಂಕೇಶ್ವರ, ಸತೀಶ ಪಾಟೀಲ, ವಾರ್ಜೆ, ಶಿವಾನಂದ ಕಪಲಾಪುರೆ ಸದ್ಗುರು ನಗರ ಭೋಸರಿ, ಶಿವಲಿಂಗ ಧವಳೇಶ್ವರ ಭೋಸರಿ, ಬಸವರಾಜ ಸಿದ್ನಾಳ ಚಂದನ ನಗರಪುಣೆ, ಪ್ರವೀಣ ಗಿಂಡೆ, ಪ್ರಮೋದ ಗಿಂಡೆ ಪುಣೆ, ಜಗನ್ನಾಥ ಭುತಪುರೆ ಬೆಂಗಳೂರು. ಸುರೇಶ ಮರೂರಕರ್ ಬೆಂಗಳೂರು, ಪರ್ವತರೆಡ್ಡಿ ಬೆಂಗಳೂರು, ಬಸವರಾಜ ಕಣಜೆ ಶಿವನಗರಿ ಪುಣೆ ಶಂಕರ ಊರೊಳಗಿನ ಮಲ್ಲಿಕಾರ್ಜುನ ತಗಾರೆ, ಎಂ.ಎಸ್.ಕೋಟೆ, ಅವರನ್ನು ಈ ಸಂದರ್ಭದಲ್ಲಿ ನೆನಪಿನ ಕಾಣಿಕೆಯನ್ನು ನೀಡಿ ಆಶೀರ್ವದಿಸಲಾಯಿತು.

ಮೂರು ದಿನಗಳವರೆಗೆ ಪುಣ್ಯ ನಗರದಲ್ಲಿ ಮಂತ್ರಪುರುಷ ಬಸವೇಶ್ವರರ ಪೂಜೆ, ಪ್ರಾರ್ಥನೆ ಮಂತ್ರ ಪಠಣದ ನಾದ ಎಲ್ಲೆಡೆ ಪಸರಿಸಿ ಪುಣ್ಯನಗರದ ನಿವಾಸಿಗಳ ಮೈ-ಮನಗಳನ್ನು ಪುಳಕಿತಗೊಳಿಸಿತು. ಎಲ್ಲೆಡೆ ಷಟ್ಕೋನಯುಕ್ತ ಬಸವ ಧ್ವಜಗಳು ರಾರಾಜಿಸಿದವು.

ಸತ್ತ ಸಮುದ್ರಕ್ಕಿಂತ, ಸಪ್ತ ಸಮುದ್ರವಾಗೋಣ....

-ಪೂಜ್ಯ ಶ್ರೀ ಬಸವ ಪ್ರಭುಸ್ವಾಮೀಜಿ

ಸಪ್ತ ಸಮುದ್ರಗಳ ಬಗ್ಗೆ ನಾವೆಲ್ಲ ಕೇಳಿದ್ದೀವಿ. ಆದರೆ ಸತ್ತ ಸಮುದ್ರದ ಬಗ್ಗೆ ಕೇಳಿರುವುದು ಬಹಳ ಕಡಿಮೆ. ಜೋರ್ಡಾನ್, ಇಸ್ರೇಲ್ ದೇಶಗಳ ಬಳಿ ಒಂದು ಬೃಹತ್ ಸರೋವರವಿದೆ ಅದರ ಹೆಸರು ಡೆಡ್‌ಸೀ ಅಂದರೆ ಸತ್ತ ಸಮುದ್ರ! ಜೋರ್ಡಾನ ನದಿ ಹುಟ್ಟುವುದು ಗೆಲಲೀ ಸರೋವರದಿಂದ ಸಿಹಿ ನೀರಿನ ಈ ನದಿ ಸುಮಾರು 320 ಕಿ.ಮೀ.ಗಳ ದೂರ ಹರಿಯುತ್ತದೆ. ಉದ್ದಕ್ಕೂ ಪುಷ್ಪ ಉದ್ಯಮಕ್ಕೆ ಹೆಸರಾದ ಇಸ್ರೇಲ್‌ನ ತೋಟಗಳಿಗೆ ನೀರುಣಿಸುತ್ತದೆ. ಜನರ ಬಾಯಾರಿಕೆಯನ್ನೂ ತಣಿಸುತ್ತದೆ. ಕೊನೆಯಲ್ಲಿ ಸತ್ತ ಸಮುದ್ರವನ್ನು ಸೇರುತ್ತದೆ. ಇದು ಸತ್ತ ಸಮುದ್ರ ಏಕೆ ಗೊತ್ತೆ ? ಇದು ಪ್ರಪಂಚದ ಅತ್ಯಂತ ಕೆಳಮಟ್ಟದ ಸರೋವರ. ಸಮುದ್ರ ಮಟ್ಟಕ್ಕಿಂತ 1300 ಅಡಿಗಳಷ್ಟು ಕೆಳಗಿದೆ ಮತ್ತು 1000 ಚದರ ಕಿ.ಮಿಗಳಷ್ಟು ವಿಶಾಲವಾಗಿದೆಯಂತೆ. ಈ ಸಮುದ್ರದ ವಿಶೇಷವೆಂದರೆ ಇದರ ನೀರು ಬೇರೆ ಸಮುದ್ರದ ನೀರಿಗಿಂತ (ಉಪ್ಪು) ಏಳು ಪಟ್ಟು ಹೆಚ್ಚು ಉಪ್ಪುಪ್ಪಾಗಿರುತ್ತದೆ. ಇಷ್ಟೊಂದು ಉಪ್ಪು ಇರುವ ಕಾರಣದಿಂದಾಗಿ ಈ ಸಮುದ್ರದಲ್ಲಿ ಮೀನು, ಮೊಸಳೆ ಮುಂತಾದ ಯಾವ ಜಲಚರಗಳು ಬದುಕುವುದಿಲ್ಲ. ಈ ನೀರನ್ನು ಗಿಡಮರಗಳಿಗೆ ಹಾಕಿದರೆ ಅವೂ ಸಹಿತ ಬದುಕಲಾರವಂತೆ.

ಈ ನೀರು ಇಷ್ಟು ಉಪ್ಪಾಗಲು ಕಾರಣವೆಂದರೆ, ಈ ಸಮುದ್ರ ತನ್ನೆಲ್ಲ ನೀರನ್ನು ಜೋಡಾನ್ ನದಿಯಿಂದ ಪಡೆಯುತ್ತದೆ. ನೀರು ಸೇರುತ್ತಲೇ ಹೋಗುತ್ತದೆ. ಆದರೆ ಒಂದು ಹನಿ ನೀರನ್ನು ಹೊರಗೆ ಬಿಡುವುದಿಲ್ಲ. ಹಾಗಾಗಿ ಉಪ್ಪಿನ ಅಂಶ ಹೆಚ್ಚುತ್ತಲೆ ಹೋಗುತ್ತದೆ. ಈ ಸಮುದ್ರ ಸತ್ತ ಸಮುದ್ರವಾಗುತ್ತದೆಯಂತೆ.

"ಇದು ಸತ್ತ ಸಮುದ್ರದ ಕಥೆ! ಆದರೆ ಇದು ನಮ್ಮ ಬಾಳಿಗು ಅನ್ವಯವಾಗುತ್ತದೆಯೇ ನೋಡೋಣ."

'ಈ ಒಂದು ಸೂತ್ರ ಎಲ್ಲ ದಿಕ್ಕಿನಿಂದಲೂ ಅನ್ವಯವಾಗುತ್ತೆ ಪ್ರೀತಿ, ವಿಶ್ವಾಸ, ಉಪಕಾರ, ವಿದ್ಯೆ, ಹಣ, ದಾನ ಮತ್ತು ಸಹಕಾರ, ಜಗತ್ತಿನಲ್ಲಿ ಅನೇಕ ಜನ ಸಂಸಾರದಿಂದ, ಸಮಾಜದಿಂದ ಪ್ರೀತಿ ವಿಶ್ವಾಸ, ಹೆಸರು, ಅಂತಸ್ತು, ಯಶಸ್ಸು ಪಡೆದಿರುತ್ತಾರೆ ಆದರೆ ಸಕಾಲದಲ್ಲಿ ಅವುಗಳನ್ನು ಉಪಯೋಗಕ್ಕೆ ತರದೆ ಖಿನ್ನರಾಗಿರುತ್ತಾರೆ. ಒಂದು ಕಡೆ ಸುಭಾಷಿತ ಹೇಳುತ್ತದೆ.

"ಶಾಂತಿ, ಸೌಹಾರ್ದ, ನಗು ಹಾಗೂ ಪ್ರೀತಿ ಇವುಗಳ ಸಮ್ಮಿಶ್ರಣವೇ ಸಂತಸ, ಆದ್ದರಿಂದ ಸಂತಸದಿಂದಿರಲು ಇವುಗಳನ್ನು ತಪ್ಪದೆ ಕಾಯ್ದುಕೊಳ್ಳಿ ಎಂದು ಹಾಗೆಯೇ ಗುರುಬಸವಣ್ಣನವರು ಹೇಳುವಂತೆ.

"ಏನಿ ಬಂದೀರಿ ಹದುಳವಿದ್ದಿರಾ ಎಂದರೆ

ನಿಮ್ಮ ಮೈಸಿರಿ ಹಾರಿಹೋಹುದೇ
ಕುಳ್ಳಿರಿ ಎಂದರೆ ನೆಲಕುಳಿ ಹೋಗುವುದೇ
ಒಡನೇ ನುಡಿದರೆ ಶಿರಹೊಟ್ಟೆ ಹೊಡೆಯುವುದೇ......"

ಎನ್ನುವಂತೆ ನಮ್ಮಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ, ಸಹಕಾರ, ಕೃತಜ್ಞತೆ, ಇವು ಜೀವನದ ಅವಿಭಾಜ್ಯ ಅಂಗವಾಗಬೇಕು. ಇಲ್ಲವಾದರೆ ಏನೂ ಪ್ರಯೋಜನವಿಲ್ಲ, ಪರಮಾತ್ಮನು ಮೆಚ್ಚುವುದಿಲ್ಲ.

ಅದೇ ರೀತಿಯಾಗಿ ವಿದ್ಯೆಯನ್ನು ನಾವು ತೆಗೆದುಕೊಂಡಾಗ ನಮ್ಮ ದೇಶದ ಯುವಕರು ಹಲವಾರು ಡಿಗ್ರಿಯನ್ನು ಪಡೆದುಕೊಂಡು ನೌಕರಿ ಸಿಗಲಾರದೆ ಮನೆಯಲ್ಲಿಯೇ ಸೋಮಾರಿಯಾಗಿ ಕಾಲ ಕಳೆಯುತ್ತಾ ಇರುತ್ತಾರೆ. ಇಂಥವರನ್ನು ಕಂಡು ಖ್ಯಾತ ಇತಿಹಾಸತಜ್ಞ ಲಂಡನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಭಾರತದ ಯುವಕರನ್ನು ಕುರಿತು ಉಪನ್ಯಾಸ ನೀಡುವಾಗ ಅವರು ಒಂದು ಮಾತನ್ನು ಹೇಳುತ್ತಾರೆ "ಭಾರತದ ಯುವಕರಲ್ಲಿ ದೇಶಪ್ರೇಮ, ಉದ್ಯಮಶೀಲತೆ, ಪೌರಪ್ರಜ್ಞೆ, ಧರ್ಮವಂತಿಕೆ, ವಿಚಾರ ಶೀಲತೆ ಇವೆಲ್ಲ ಇದ್ದರೂ ಸಕಾಲದಲ್ಲಿ ಪ್ರಯೋಜನ ಪಡೆಯುವ ಬದಲು ಅವರ ದೌರ್ಬಲ್ಯಗಳನ್ನು ತಮ್ಮದಾಗಿಸಿಕೊಳ್ಳಲು ಇಲ್ಲಿನ ವಿದ್ಯಾವಂತರು ಯತ್ನಿಸುತ್ತಾರೆ."

ನಿಜವಾಗಿಯು ಇಂತಹ ಮಾತನ್ನು ನೆನಪಿಸಿಕೊಂಡಾಗ, ಇವತ್ತು ಶಿಕ್ಷಣವನ್ನು ಮುಗಿಸಿ ಅದೆಷ್ಟು ಜನ ಯುವಕರು ತಮ್ಮ ಊರುಗಳಿಗೆ ಹೋಗಿ ಪರಾಭಾವಗೊಂಡಿರುತ್ತಾರೆ. ಅದರ ಬದಲು ತಮ್ಮ ಊರಲ್ಲಿರುವ ಬಡವ, ಅನಾಥ ನಿರ್ಗತಿಕ ಮಕ್ಕಳಿಗೆ ತಾವು ಗಳಿಸಿ ಕೊಂಡಿರುವ ಜ್ಞಾನವನ್ನು ಧಾರೆ ಎರೆದರೆ ತಮ್ಮ ಜ್ಞಾನವು ಇನ್ನಷ್ಟು ವೃದ್ಧಿಯಾಗುವುದರ ಜೊತೆಗೆ ಆ ಮಕ್ಕಳ ಶಿಕ್ಷಣ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಇದನ್ನು ಬಿಟ್ಟು ಹಮಾಲಿ ಕೂಲಿ ಕೆಲಸ ಮಾಡಿ ತಮ್ಮ ದೌರ್ಬಲ್ಯವನ್ನು ಎತ್ತಿ ತೋರಿಸುತ್ತಾರೆ. ಇದರಿಂದ ಏನು ಪ್ರಯೋಜನವಾಗದು.

ಹಾಗೆಯೇ ಧಾರ್ಮಿಕ ರಂಗದಲ್ಲಿಯೂ ಅನೇಕ ತಪಸ್ವಿಗಳು, ಅನುಭಾವಿಗಳು ಮಠ ಪೀಠದ ಸ್ವಾಮಿಗಳು ಎಷ್ಟೇ ಜ್ಞಾನವನ್ನು ಗಳಿಸಿದರೂ ಸಹಿತ ಕೇವಲ ಕಲ್ಲಿನ ಗವಿಯ ಮಣ್ಣಿನ ಗವಿಯ ಅಥವಾ ಮಠದ ಒಳಗಡೆಯೇ ಸೀಮಿತವಾಗಿರುವುದು ಒಂದು ಕಡೆಯಾದರೆ, ಅತಿಯಾದ ವೈಜ್ಞಾನಿಕ ಜ್ಞಾನವನ್ನು ಪಡೆದುಕೊಂಡು ಪವಾಡ, ತಾಯತ, ಮಂತ್ರ-ತಂತ್ರ, ಮಾಟ, ನಿಂಬಿಹಣ್ಣು ಕಟ್ಟುವುದರಲ್ಲಿ, ಕಾಲವನ್ನು ಅಪಹರಣ ಮಾಡುತ್ತಾರೆ. ಅದರ ಬದಲು ವೈಚಾರಿಕ ಪ್ರಜ್ಞೆಯಿಂದ ವೈಜ್ಞಾನಿಕತೆಯ ತಳಹದಿಯ ಮೇಲೆ ಜಗತ್ತಿಗೆ ಪ್ರವಚನದ ಮೂಲಕ ಜ್ಞಾನ ಕೊಟ್ಟರೆ ಅದೆಷ್ಟು ಜನ ಯುವಕರು ಪರಿವರ್ತನೆಯಾಗುತ್ತಾರೆ. ಎಂಬ ಅರಿವು ಆಗಲಿ ಜ್ಞಾನವನ್ನು ಕೊಡುವ ಹಂಬಲವಾಗಲಿ ಇರುವುದಿಲ್ಲ. ಅದನ್ನು ಪಡೆದುಕೊಳ್ಳುವ ಜ್ಞಾನವು ಯುವಕರಲ್ಲಿ ಮೊಳೆಯುತ್ತಿಲ್ಲ, ಖೇದನೀಯಕರ ಸಂಗತಿ.

ಇನ್ನು ಲೌಕಿಕ ಪ್ರಪಂಚದ ಜನರ ಮಧ್ಯದಲ್ಲಿ ನಿಂತು ನೋಡಿದಾಗ ಜಗತ್ತಿನಲ್ಲಿ ಇಂದು ಪ್ರೀತಿ, ವಿಶ್ವಾಸ, ನಂಬಿಕೆ, ಪರಸ್ಪರ ಸಹಕಾರ, ಜ್ಞಾನಕ್ಕಿಂತ ಹೆಚ್ಚಿನ ಸಮಯವನ್ನು ಕೇವಲ ದುಡ್ಡು ಗಳಿಸಲಿಕ್ಕಾಗಿಯೇ ಹಗಲು ರಾತ್ರಿ ದುಡಿಯುತ್ತಲೇ ಇರುತ್ತಾರೆ. ಇವರಿಗೆ ಕಾಯಕ ಎನ್ನುವ ಶಬ್ದದ ಅರ್ಥವೇ ಗೊತ್ತಿರುವುದಿಲ್ಲ. ಬಸವಣ್ಣನವರು ಹೇಳಿದ್ದಾರಲ್ಲ "ಕಾಯಕವೇ ಕೈಲಾಸ" ಎಂದು ಅದಕ್ಕೆ ನಾವು ಕಾಯಕ ಮಾಡ್ತೀವಿ ಅನ್ನುತ್ತಾರೆ. ಆದರೆ ಅದರ ಹಿಂದೆ ದಾಸೋಹವೇ ದೇವಧಾಮ ಎಂಬ ಶಬ್ದ ಮರೆತೇ ಬಿಟ್ಟಿರುತ್ತಾರೆ. ಕಾಯಕವೆಂದರೆ ಮಾತಾಜಿಯವರು ಹೇಳುವಂತೆ ಅದರ ಮೌಲ್ಯಗಳು ಇರಬೇಕು ಭೌತಿಕ ಮೌಲ್ಯಗಳು, ನೈತಿಕ ಮೌಲ್ಯಗಳು, ಆದ್ಯಾತ್ಮ ಮೌಲ್ಯಗಳು, ಇವು ಇರಲಾರದೆ ಅವರ ಜೀವನವು ಕೇವಲ ಕತ್ತೆ ದುಡಿತವಾಗಿರುತ್ತದೆ. ಕಾಯಕ ಮಾಡಿಗಳಿಸು ಪರವಾಗಿಲ್ಲ. ಆದರೆ ಸ್ವಲ್ಪವಾದರೂ ದಾಸೋಹ, ಧರ್ಮ ದೇವರಿಗಾಗಿ ಸಮಾಜ್ಕಕಾಗಿ ವಿನಿಯೋಗಬೇಕು. ಇವತ್ತಿನ ಜನಗಳಲ್ಲಿ ಕೊಟ್ಟು ಹೆಚ್ಚಿಸಿಕೊಳ್ಳುವ ಪರಿಜ್ಞಾನವೇ ಇರುವುದಿಲ್ಲ ಹಾಗೆಂದರೇನು! ಬಸವಣ್ಣನವರು ತಮ್ಮೊಂದು ವಚನದಲ್ಲಿ ತುಂಬಾ ಚೆನ್ನಾಗಿ ಪ್ರಸ್ತಾಪ ಮಾಡುತ್ತಾರೆ.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಲ ಪಡಿಪದಾರ್ಥವ ನೀವನು ಕಾಣಾ ಲಿಂಗದೇವಾ.

ಒಂದು ಮರಕ್ಕೆ ಬಾಯಿ ಎಂದರೆ ಬೇರು. ಅದರ ಬುಡಕ್ಕೆ ನೀರನ್ನು ಹಾಕಿದಗ ನಮಗೆ ಆ ಮರ ಫಲವನ್ನು ನೀಡುತ್ತದೆ. ಸಾಮಾನ್ಯವಾಗಿ ನಾವೆಲ್ಲರೂ ಗಮನಿಸುತ್ತೇವೆ ಎಂದರ್ಥ. ಅನಾಥರಿಗೆ, ಬಡವರಿಗೆ, ಶೋಷಿತರಿಗೆ ಧರ್ಮದ ಕಾರ್ಯಗಳಿಗೆ ದಾಸೋಹ ಮುಖಾಂತರ ನೀಡಿದಾಗ ಹೆಸರು, ಯಶಸ್ಸು, ಪ್ರತಿಫಲ, ಬರುವುದಲ್ಲದೆ ಪರಮಾತ್ಮನ ಅನುಗ್ರಹವೂ ಆಗುತ್ತದೆ. ಅಷ್ಟೆ ಅಲ್ಲದೆ ಅದರ ಮೂಲಕವಾಗಿ ಮಾಡುವ ಕಾಯಕದಲ್ಲಿ ಹೆಚ್ಚು ಹೆಚ್ಚಿನ ಆದಾಯ ಇಮ್ಮಡಿಯಾಗುತ್ತದೆ ಎನ್ನುತ್ತಾರೆ. ಹಾಗಂತ ಹೇಳಿ ಗಳಿಸಿದ್ದೆಲ್ಲ ಕೊಡಬೇಕು ಅಂತಲ್ಲ ಗಳಿಸಿದರಲ್ಲಿ ನೀವು ನಿಮ್ಮ ಕುಟುಂಬ ಮನೆ, ಸುಖ ಸಂತೋಷದಿಂದ ಬದುಕಿ ಬಾಳಿ ಮಿಕ್ಕಿದ್ದನ್ನು ಸಮಾಜಕ್ಕೆ ವಿನಿಯೋಗ ಮಾಡಬೇಕೆಂದು ಸರ್ವಜ್ಞ ಶರಣರು ಹೇಳುತ್ತಾರೆ.

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಒಯ್ಯುವರೆ
ಕೊಡಬೇಡ ಕೊಡದೇ ಇರಬೇಡ
ದಾನವನು ಬಿಡಬೇಡ ಸರ್ವಜ್ಞ

ಸ್ವಪ್ರಯತ್ನದಿಂದ ದೇವರ ಕರುಣೆಯಿಂದ ಸಾಕಷ್ಟು ಹಣ ಗಳಿಸಿದ್ದರೆ ಸಾಧ್ಯವಿದ್ದಷ್ಟು ಪ್ರಮಾಣದಲ್ಲಿ ದಾನಧರ್ಮಗಳನ್ನು ಮಾಡಬಹುದು. ವ್ಯಕ್ತಿಗಳು ಉದ್ಯಮಿಗಳು ಇದೇ ಕಾರಣಕ್ಕಾಗಿ ಇಂತಿಷ್ಟು ಹಣ ಎಂದು ನಿಗಧಿಮಾಡಿ ಸಮಾಜಸೇವಾ ಕಾರ್ಯಗಳಿಗೆ

ಬಳಸುವುದನ್ನು ನಾವು ನೋಡಬಹುದು.

ಇಲ್ಲಿ ಇಂದು ಕುತೂಹಲಕಾರಿ ಪ್ರಸಂಗ ಒಮ್ಮೆ ಮಾತಾಜಿಯವರ ಶಿಷ್ಯರು ಹಣ ಮತ್ತು ಹೃದಯ ಎರಡರಲ್ಲಿ ಶ್ರೀಮಂತರು. ಅವರು ದಾನ ಧರ್ಮ ಮಾಡುವ ಪ್ರಮಾಣ ನೋಡಿ ಒಬ್ಬರು ಆಶ್ಚರ್ಯ ವ್ಯಕ್ತಪಡಿಸಿದಾಗ ಅವರು ಹೇಳಿದ ಸರಳ ಮಾತು. "ನನ್ನ ಬಳಿ ಹಣ ಇದೆ, ನಾನು ದಾನ ಮಾಡುತ್ತೇನೆ ಎನ್ನುವುದು ಆಶ್ಚರ್ಯವಲ್ಲ ನಾನು, ದಾನ ಮಾಡಿದಷ್ಟು ನನ್ನ ಹಣ ಇನ್ನು ಹೆಚ್ಚು ಹೆಚ್ಚಾಗುತ್ತದೆ ಎನ್ನುವುದೇ ಆಶ್ಚರ್ಯ ಅದು ನಿಷ್ಠೆಯಿಂದ ಕಾಯಕಮಾಡಿ, ಭಕ್ತಿಯಿಂದ ಸಮರ್ಪಣೆ ಮಾಡಿದಾಗ ಮಾತ್ರ ಸಾಧ್ಯ ಎಂದರಂತೆ."

ಅಂದ ಹಾಗೆಯೇ ಒಂದು ಡ್ಯಾಂನಲ್ಲಿ ನೀರನ್ನು ತುಂಬುವವರೆಗು ಜಲ ಮಂಡಳಿಯವರು ಹೊರಗಡೆ ನೀರನ್ನು ಬಿಡುವುದಿಲ್ಲ. ಡ್ಯಾಂ ತುಂಬಿದಾಗ ಗೇಟ್‌ನ ಮುಖಾಂತರವಾಗಿ ಸಂಗ್ರಹಿಸಲ್ಪಟ್ಟ ತುಂಬಿದ ನೀರನ್ನು ಸ್ಥಿರ ಪ್ರಮಾಣದ ಮಟ್ಟದವರೆಗೂ ಸುಮಾರು T.M.C ನೀರನ್ನು ಬಿಡುತ್ತಾರೆ ಮತ್ತೆ ಪುನಃ ಶೇಖರಣೆಯಾಗುತ್ತಾ ಇರುತ್ತದೆ. ಇಲ್ಲವಾದರೆ ಡ್ಯಾಂ ಭರ್ತಿಯಾದರು ನೀರನ್ನು ಬಿಡದೇ ಇದ್ದರೆ ಕಟ್ಟಲ್ಪಟ್ಟ ಡ್ಯಾಂನ ದಡ ಹೊಡೆದು ತಗ್ಗು ಪ್ರದೇಶದಲ್ಲಿ ನೀರು ನುಗ್ಗಿ ಅಪಾರ ಪ್ರಮಾಣದ ನಷ್ಟವನ್ನು ತೆತ್ತಬೇಕಾಗುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿ ಸಂಪತ್ತನ್ನು ಗಳಿಕೆ ಮಾಡುವುದು ಮುಖ್ಯವಲ್ಲ. ಗಳಿಸಿದ 100% ಶೇ. ಪ್ರಮಾಣಲ್ಲಿ 10% ಶೇ ಪ್ರಮಾಣ ದಾಸೋಹವೆಂಬ ಗೇಟ್‌ನ ಮೂಲಕ ವಿನಿಯೋಗ ಮಾಡಿದಂತೆಲ್ಲ, ಪರಮಾತ್ಮ ಕೊಡುತ್ತಾ ಇರುತ್ತಾನೆ. ಇಲ್ಲವಾದರೆ

ಸುಳ್ಳರಿಗೆ ಕಳ್ಳರಿಗೆ ಡೊಂಬು ಡೊರವರಿಗೆ
ಕೊಡುವವರು ದಾನವನ್ನು
ಧರ್ಮಕ್ಕೆ ಎಳ್ಳಷ್ಟು ಕೊಡರು ಸರ್ವಜ್ಞ

ಎಂಬ ಸರ್ವಜ್ಞ ಶರಣರ ವಾಣಿಯಂತೆ ಕಳ್ಳ ಸುಳ್ಳ, ದರೋಡೆಕೋರರಿಗೆ Incom Tax ನವರಿಗೆ ಕೊಡಬೇಕಾಗುವುದರಲ್ಲಿ ಸಂದೇಹವೇ ಇಲ್ಲ ಅಂದಾಗ ಸರ್ವಜ್ಞ ಶರಣರು, ಹೇಳಿದ ಮಾತಿನಲ್ಲಿ ದಾನವನ್ನು ಕೊಡದೇ ಇರಬಾರದು ಎಂಬ ಮಾತು ಅದೆಷ್ಟು ಸತ್ಯವಾಗಿದೆ ಗಮನಿಸಬಹುದು. ಅದೇ ರೀತಿಯಾಗಿ

'ಕೆರೆಯ ನೀರನ್ನು ಕೆರಗೆ ಚೆಲ್ಲಿ
ವರವ ಪಡೆದವರಂತೆ ಕಾಣಿರೋ"

ಎಂಬ ಮಹಾತ್ಮರ ಸಂದೇಶವನ್ನು ಅರಿತು ಪ್ರೀತಿ, ವಿಶ್ವಾಸ, ಜ್ಞಾನವನ್ನು ಧಾರೆ ಎರೆದು ಧಾನಧರ್ಮಗಳನ್ನು ಮಾಡಿ ಸಪ್ತ ಸಮುದ್ರವಾಗೋಣ. ಗಳಿಸಿ ಸಂಪಾದನೆ ಮಾಡದೆ ಸತ್ತ ಸಮುದ್ರವಾಗುವುದು ಬೇಡ.

ಬಸವ ಪಂಚಮಿ

-ಸಚ್ಚಿದಾನಂದ ಚಟನಳ್ಳಿ

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ.
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ.
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣ.
ಸೀಮೆ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ.
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ.
ಜಂಗಮಕ್ಕೆ ಮಾಡುವ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣ
ಆ ಬಸವಣ್ಣಂಗೆ ಶರಣೆಂಬ ಪಥವನೆ ತೋರು ಕಂಡಾ ಕಲಿದೇವರ ದೇವಾ

ದಿ.4-08-2011ರಂದು ಗುರುಬಸವ ಪಂಚಮಿ. ಲಿಂಗಾಯತ ಧರ್ಮೀಯರಿಗೆ ಇದು ನಾಗ ಪಂಚಮಿಯಲ್ಲ. ಕಲ್ಲು ನಾಗರಕ್ಕೆ ಹಾಲೆರೆಯುವವರು ಲಿಂಗಾಯತರೇ ಅಲ್ಲ. ಶ್ರಾವಣ ಶುದ್ಧ ಪಂಚಮಿ 30-07-1196 ರಂದು ಗುರುಬಸವಣ್ಣನವರು ಲಿಂಗೈಕ್ಯರಾಗಿದ್ದರು. ನಮಗೆ ಬಸವ ಜಯಂತಿಗಿಂತ ಬಸವ ಪಂಚಮಿ ಅತಿ ಮಹತ್ವದ ದಿನ. ಗುರುಬಸವಣ್ಣನರು 30-04-1134ರಂದು ಜನಿಸಿದರು. ಅವರು ಜನಿಸಿದಾಗ ನಮಗೆ ಯಾವುದೇ ತತ್ವ, ಧರ್ಮವನ್ನು ಕೊಟ್ಟಿರಲಿಲ್ಲ. ಆದರೆ ಅವರು ಲಿಂಗೈಕ್ಯರಾಗುವುದರ ಒಳಗಾಗಿ 'ಲಿಂಗಾಯತ ಧರ್ಮ'ವೆಂಬ ಹೊಸ ಧರ್ಮವನ್ನು ಕೊಟ್ಟರು. ಅನುಭಾವ ಮಂಟಪವೆಂಬ ಧಾರ್ಮಿಕ ಸಂಸ್ಥೆಯನ್ನು ರಚಿಸಿ, ಆ ಮೂಲಕ ಸಂಸ್ಕಾರ, ಸಂಘಟನೆ ಮತ್ತು ಸಹೋದರತೆಯನ್ನು ಈ ಸಮಾಜದಲ್ಲಿ ತಂದರು. ಗುರುಬಸವಣ್ಣನವರು ಪ್ರತಿಯೊಂದು ರಂಗದಲ್ಲಿಯೂ ಸುಧಾರಣೆಯನ್ನು ತಂದರು. ಇದರಿಂದಾಗಿ ಮರ್ತ್ಯಲೋಕಕ್ಕೆ ಹೊಸ ಬೆಳಕು ಬಂದಂತಾಯಿತು.

ಎಲ್ಲಾ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕು । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು॥

ಎಂದು ಜನಪದ ಕವಿಗಳು ಗುರುಬಸವಣ್ಣನವರನ್ನು ಸ್ತುತಿಸಿದ್ದಾರೆ. ಮನುಕುಲವೆಂಬ ಮಹಾ ವೃಕ್ಷ ಸಾವಿರ ಸಾವಿರ ವರ್ಷಕ್ಕೊಮ್ಮೆ ಮೈದಳೆಯುವಂಥ ಪುಷ್ಪ ಗುರುಬಸವಣ್ಣನವರು. ಮರ್ತ್ಯಲೋಕದಲ್ಲಿ ಅವರು ಮಾನವರಾಗಿ ಹುಟ್ಟಿದರೂ, ಇಲ್ಲಿಯ ಸಂಸಾರವನ್ನು ಹೊದ್ದದೇ ಅವರು ಬದುಕುತ್ತಾರೆ.

ಮುತ್ತು ನೀರಲ್ಲಾಯಿತ್ತು, ವಾರಿಕಲ್ಲು ನೀರಲ್ಲಾಯಿತ್ತು,
ಉಪ್ಪು ನೀರಲ್ಲಾಯಿತು,
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು
ಮುತ್ತು ಕರಗಿದುದನಾರೂ ಕಂಡವರಿಲ್ಲ

ಎಂದು ಅಕ್ಕಮಹಾದೇವಿಯವರು ಒಂದು ವಚನದಲ್ಲಿ ಹೇಳುವಂತೆ, ಲಕ್ಷ ಲಕ್ಷ ಜನರು, ವಾರಿಕಲ್ಲಿನಂತೆ ಈ ಜಗತ್ತಿನಲ್ಲಿ ಹುಟ್ಟಿದರೂ ಅವರು ಕರಗಿ ಹೋಗುತ್ತಾರೆ. ಅರ್ಥಾತ್ ಇಲ್ಲಿ ಉಳಿಯುವುದಿಲ್ಲ. ಉಪ್ಪು ಕರಗಿತ್ತು ಎಂದರೆ ವಾರಿಕಲ್ಲಿಗಿಂತ ಸ್ವಲ್ಪ ತಡವಾಗಿ ಉಪ್ಪು ಕರಗುತ್ತದೆ. ಕೆಲವು ಮತ ಪಂಥದ ಪ್ರವರ್ತಕರು ಉಪ್ಪಿನಂತೆ ಸ್ವಲ್ಪ ದಿನಗಳ ಕಾಲ ಇದ್ದು ಮತ್ತೆ ಒಂದು ದಿನ ಹೇಳ

ಹೆಸರಿಲ್ಲದಂತೆ ಈ ಸಮಾಜದಿಂದ ಮರೆಯಾಗಿ ಬಿಡುತ್ತಾರೆ. ಆದರೆ ಗುರುಬಸವಣ್ಣನವರು ನೀರಲ್ಲಾದ ಮುತ್ತಿನಂತೆ, ಮರ್ತ್ಯಲೋಕದಲ್ಲಿ ಮಾನವರಾಗಿ ಹುಟ್ಟಿದರೂ ಅವರು ಶಾಶ್ವತವಾಗಿ ನಮ್ಮೆಲ್ಲರ ಹೃದಯದಲ್ಲಿ ವಾಸವಾಗಿರುತ್ತಾರೆ. ವಾರಿಕಲ್ಲು ಉಪ್ಪಿನಂತೆ ಕರಗದೇ ಮುತ್ತಿನಂತೆ ಶಾಶ್ವತವಾಗಿ, ತಮ್ಮ ವಚನಗಳ ರೂಪದಲ್ಲಿ ಜೀವಿಸಿರುತ್ತಾರೆ.

ಚಿಕ್ಕವನಿರುವಾಗ ನಾನೊಂದು ಕಥೆ ಓದಿದ್ದೆ, ಮಂತ್ರ ತಂತ್ರಗಳನ್ನು ಸಾಧಿಸಿಕೊಂಡಿದ್ದ ಒಬ್ಬ ರಾಜನಿದ್ದ. ಅವನು ತನ್ನ ಪ್ರಾಣವನ್ನು ತನ್ನಲ್ಲಿ ಇಟ್ಟುಕೊಂಡಿರಲಿಲ್ಲ. ಒಂದು ಬಂಗಾರದ ಗಿಳಿಯನ್ನು ಮಾಡಿ ಅದರಲ್ಲಿ ತನ್ನ ಪ್ರಾಣ ತುಂಬಿದ. ಆ ಗಿಳಿಯನ್ನು ವಜ್ರದ ಪಂಜರದಲ್ಲಿಟ್ಟಿದ್ದ. ಆ ಪಂಜರವನ್ನು ಸಮುದ್ರದ ಮಧ್ಯದಲ್ಲಿ ಯಾರೂ ಹೋಗಲಿಕ್ಕೆ ಸಾಧ್ಯವಾಗದೇ ಇರುವಂಥ ದ್ವೀಪದಲ್ಲಿರುವ ಗವಿಯಲ್ಲಿ ಇಟ್ಟಿದ್ದ. ಆ ಗಿಳಿ ನಾಶವಾದರೆ ಮಾತ್ರ ಅವನ ಪ್ರಾಣ ಹೋಗುತ್ತಿತ್ತು. ಈ ರೀತಿಯ ಸಾಧನೆಯನ್ನು ಅವನು ಮಾಡಿದ್ದ. ಇವರಿಂದ ಅವನಿಗೆ ಅಮರತ್ವವು ಪ್ರಾಪ್ತಿಯಾಗಿತ್ತು.

ಅದೇ ರೀತಿ ಗುರುಬಸವಣ್ಣನವರು, ಇಂದೂ ಜೀವಂತವಾಗಿದ್ದಾರೆ! ಅವರು ಅಮರವಾಗಿದ್ದಾರೆ! ಅಂದು ಅವರು ಕಲ್ಯಾಣದ ಅನುಭಾವ ಮಂಟಪದಿಂದ ಕೂಡಲ ಸಂಗಮಕ್ಕೆ ಹೋಗುವಾಗ ಅಲ್ಲಿದ್ದ ಶರಣರಿಗೆ ''ವಚನ ಸಾಹಿತ್ಯ ಲಿಂಗಾಯತ ಧರ್ಮದ ಜೀವಾಳ, ವಚನ ಸಾಹಿತ್ಯದಲ್ಲಿ ನನ್ನ ಪ್ರಾಣವಿದೆ. ಅದರ ರಕ್ಷಣೆಯೇ ನನ್ನ ಪ್ರಾಣ ರಕ್ಷಣ'' ಎಂದು ತಿಳಿಸಿದರು. ಅದಕ್ಕಾಗಿ ಮಡಿವಾಳ ಮಾಚಿದೇವರು, ಚೆನ್ನಬಸವಣ್ಣನವರು ತಮ್ಮ ಪ್ರಾಣವನ್ನು ಕೊಟ್ಟು ಗುರುಬಸವಣ್ಣನವರ ಪ್ರಾಣವನ್ನು ರಕ್ಷಿಸಿದರು. ವಚನ ಸಾಹಿತ್ಯ ಉಳಿಯಿತು, ಗುರುಬಸವಣ್ಣನವರೂ ಉಳಿದರು. ಅದಕ್ಕಾಗಿಯೇ ಗುರು ಬಸವಣ್ಣನವರ ಪ್ರಾಣವಾದ ವಚನಗಳ ಪುಸ್ತಕಗಳನ್ನು ನಾವು ಬಸವ ಜಯಂತಿಯಂದು ತೊಟ್ಟಿಲಲ್ಲಿ ಇಟ್ಟು ತೂಗುತ್ತೇವೆ.

ಗುರುಬಸವಣ್ಣನವರು ಸಾಧಿಸಿದ ಸಾಧನೆ ಮತ್ತು ತಮ್ಮ ಸಮಕಾಲೀನ ಶರಣರಿಗೆ ಬೋಧಿಸಿದ ಬೋಧನೆ, ಎರಡೂ ಹಿಮಾಲಯ ಪರ್ವತದಷ್ಟು ಎತ್ತರದಲ್ಲಿ ನಿಲ್ಲುತ್ತವೆ. ಗುರುಬಸವಣ್ಣನವರು ಹಾಗೂ ಸಮಕಾಲೀನ ಶರಣರು ಸಾಧಿಸಿದ ಮಟ್ಟವನ್ನು ಯಾರಿಂದಲೂ ಸಾಧಿಸಲು ಸಾಧ್ಯವಿಲ್ಲ ಎನಿಸುತ್ತದೆ. ಗುರುಭಕ್ತಿಯನ್ನು ಮಾಡುವುದರಲ್ಲಿ ಶರಣರು ತಲುಪಿದ ಸ್ಥಾನ ಉನ್ನತವಾದುದು. ಮಹಾಭಾರತದಲ್ಲಿ ಏಕಲವ್ಯನು ಸಾಂಕೇತಿಕವಾಗಿ ದ್ರೋಣಾಚಾರ್ಯರ ಮೂರ್ತಿಯನ್ನು ಮಾಡಿ, ಅದರ ಮುಂದೆ ನಿಂತು ಬಿಲ್ವಿದ್ಯೆಯನ್ನು ಕಲಿತ. ಇದನ್ನರಿತ ದ್ರೋಣಾಚಾರ್ಯರು ಇನ್ನೊಬ್ಬ ಶಿಷ್ಯನ ಒತ್ತಾಸೆಗೆ ಮಣಿದು, ಏಕಲವ್ಯ ತಾನಾಗಿಯೇ ಬಿಲ್ವಿದ್ಯೆ ಕಲಿತಿದ್ದರೂ ಅವನಲ್ಲಿರುವ ಗುರು ಭಕ್ತಿಯನ್ನು ದುರುಪಯೋಗ ಮಾಡಿಕೊಂಡರು. ಅವನ ಬಲಗೈಯ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಕೇಳುವುದರ ಮುಖಾಂತರ ಅವನಲ್ಲಿರುವ ಬಿಲ್ವಿದ್ಯೆಯನ್ನು ಕಿತ್ತು ಕೊಂಡರು. ಇದರಿಂದ ಮಹಾಭಾರತವು ಒಬ್ಬ ಅಪ್ರತಿಮ ವೀರನನ್ನು ಕಳೆದುಕೊಂಡಿತು. ಈ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ಗುರುಬಸವಣ್ಣನವರ ಗುರುತ್ವವನ್ನು ಅಳೆಯುವುದಾದರೆ, ಅದು ಹಿಮಾಲಯ ಪರ್ವತಕ್ಕಿಂತ ಎತ್ತರ ಎತ್ತರ. ಗುರುಬಸವಣ್ಣನವರು ಸ್ವತಃ ಹರಳಯ್ಯನವರ ಮನೆಗೆ ಹೋಗಿ ಅವರಿಗೆ ಧರ್ಮ ಸಂಸ್ಕಾರ ಕೊಟ್ಟು, ಓದಲು ಬರೆಯಲು ಕಲಿಸಿದರು. ನಂತರ ಒಂದು ದಿನ ಅವರ ಮನೆಯಲ್ಲಿ ಪ್ರಸಾದ ಮಾಡಿ ಹೊರಡುವಾಗ 'ಶರಣು' ಎಂದ ಹರಳಯ್ಯನವರಿಗೆ 'ಶರಣು ಶರಣಾರ್ಥಿ' ಎಂದರು. ಗುರುವು ನನ್ನ ಮೇಲೆ ಒಂದು ಶರಣಿನ ಭಾರವನ್ನು ಹಾಕಿದ್ದಾರೆ, ಎಂದು ತಿಳಿದು ತಮ್ಮ ಮೈ

****

ಚರ್ಮವನ್ನೇ ತೆಗೆದು ಚೆಮ್ಮಾವುಗೆಯನ್ನು ಮಾಡಿ ಗುರುಬಸವಣ್ಣನವರಿಗೆ ಅರ್ಪಿಸ ಹೋದರು. ಆಗ ಆ ಮಹಾಗುರುವು ಮಾಡಿದ್ದೇನು? ''ಅಯ್ಯಾ ನಿಮ್ಮ ಶರಣರ ಚೆಮ್ಮಾವುಗೆಗೆ ಪೃಥ್ವಿ ಸಮಬಾರದಯ್ಯ'' ಎಂದು ತಲೆಯ ಮೇಲೆ ಇಟ್ಟು ಕೊಂಡರು. ಜಗತ್ತಿನ ಇತಿಹಾಸದಲ್ಲಿ ಗುರುಬಸವಣ್ಣನವರಂಥ ಗುರು, ಹರಳಯ್ಯನವರಂಥ ಶಿಷ್ಯ ಮತ್ತೆಲ್ಲಿಯೂ ಸಿಗಲಿಕ್ಕೆ ಸಾಧ್ಯವಿಲ್ಲ.

ಲಿಂಗ ಭಕ್ತಿಯಲ್ಲಿ ಗುರು ಬಸವಣ್ಣನವರು ಶರಣರನ್ನು, ಉನ್ನತ ಸ್ಥಿತಿಗೆ ಕೊಂಡೊಯ್ದರು. ಅಲ್ಲಿಯವರೆಗೆ ಸಮಾಜದಲ್ಲಿ ದೇವರನ್ನು ಬೇಡಿಕೊಳ್ಳುವುದಕ್ಕಾಗಿ ಪೂಜಿಸುವ ಪರಿಪಾಠವಿತ್ತು. ಆದರೆ ಶರಣರು ಭಕ್ತಿ ವ್ಯಾಖ್ಯಾನವನ್ನೇ ಬದಲಾಯಿಸಿದರು. ''ಅಯ್ಯಾ ನೀ ಕೇಳಿದರೆ ಕೇಳು ಕೇಳದಿರ್ದೊಡೆ ಮಾಣು, ನಾ ನಿಮ್ಮ ಹಾಡಿದಲ್ಲದೆ ಸ್ಮರಿಸಲಾರೆನಯ್ಯಾ. ಅಯ್ಯಾ ನೀ ಮೆಚ್ಚಿದಡೆ ಮೆಚ್ಚು ಮೆಚ್ಚದಿರ್ದಡೆ ಮಾಣು ನಾ ನಿಮ್ಮ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ..... ಚೆನ್ನಮಲ್ಲಿಕಾರ್ಜುನಯ್ಯಾ ನಾ ನಿಮ್ಮ ಪೂಜಿಸಿ ಹರುಷದಲೋಲಾಡುವೆನಯ್ಯಾ'' ಎಂದರು. ಪೂಜೆಯನ್ನು ಸ್ವಾನಂದಕ್ಕಾಗಿ ಮಾಡುವಂಥದ್ದನ್ನು ಗುರುಬಸವಣ್ಣನವರು ಕಲಿಸಿದರು. ಅದನ್ನು ಶರಣರು ಅಷ್ಟೇ ನಿಷ್ಠೆಯಿಂದ ಅಳವಡಿಸಿಕೊಂಡರು.

ದಾಸೋಹದಲ್ಲಿ ಶರಣರು ಔನ್ನತ್ಯಕ್ಕೇರಿದರು. ಗುರುಬಸವಣ್ಣನವರು ''ಸೋಹಂ ಎಂದು ಜನ್ಮ ಜನ್ಮಕ್ಕೆ ಹೋಗಲೀಯದೆ ದಾಸೋಹಂ ಎಂದೆನಿಸಯ್ಯಾ'' ಎಂದರು. ನಾನು ಬೇರೆಯವರಿಗೆ ಸಹಾಯ ಉಪಕಾರ ಮಾಡುತ್ತಿದ್ದೇನೆ ಎನ್ನುವುದಕ್ಕಿಂತ ನಾನು ಸಹಾಯ ಮಾಡಲು ಅವಕಾಶ ಮಾಡಿಕೊಟ್ಟಿರುವುದರಿಂದ ಬೇರೆಯವರಿಂದ ಉಪಕೃತನಾಗಿದ್ದೇನೆ ಎನ್ನುವುದು ನಿಜವಾದ ದಾಸೋಹ ಎಂಬುದನ್ನು ಅರುಹಿದರು. ಗುರುಬಸವಣ್ಣನವರು ಕಾಯಕ, ದಾಸೋಹ, ಭಕ್ತಿ, ಶಿಕ್ಷಣ, ನೈತಿಕತೆ, ದಾಂಪತ್ಯ ಜೀವನ ಇವೆಲ್ಲವುಗಳಲ್ಲಿ ಔನತ್ಯವನ್ನು ತಲುಪಿರುವುದೇ ಅಲ್ಲದೇ ಇರತ ಶರಣರನ್ನೂ ಆ ಮಟ್ಟಕ್ಕೆ ಏರಿಸಿದರು.

ಪ್ರಜಾಪ್ರಭುತ್ವದ ಕಾಲವಾದ ಇಂದಿನ ದಿನಗಳಲ್ಲಿಯೂ ಸಮಗಾರ, ಮಡಿವಾಳ, ದನಕಾಯುವರು ಮತ್ತು ಇನ್ನೂ ಅನೇಕ ಜಾತಿ ಪಂಗಡಗಳೆನಿಸಿ ಕೊಂಡವರಿಗೆ ಶಿಕ್ಷಣವಿಲ್ಲ. ಆದರೆ ಗುರುಬಸವಣ್ಣನವರು ಇಂಥ ಕಾಯಕ ಮಾಡುತ್ತಿದ್ದವರೆಲ್ಲರಿಗೂ ಶಿಕ್ಷಣವನ್ನು ಕೊಟ್ಟರು. ಅದು ಕೇವಲ ಉಪಜೀವನದ ಶಿಕ್ಷಣವಾಗಿರಲಿಲ್ಲ. ಜೀವನದ ಶಿಕ್ಷಣವೂ ಆಗಿತ್ತು. ವಿವಿಧ ಸಮಾಜದಿಂದ ಬಂದ ಶರಣರಿಂದ ರಚನೆಯಾದ ವಚನ ಸಾಹಿತ್ಯವು ಕಲ್ಯಾಣ ರಾಜ್ಯದ ಅಡಿಪಾಯವಾಯಿತು.

ಗುರುಬಸವಣ್ಣನವರ ಕ್ರಾಂತಿಗೆ ಬೆನ್ನೆಲುಬಾಗಿ ನಿಂತಿದ್ದ ಮಾಧ್ಯಮ ವಚನ ಸಾಹಿತ್ಯ. ಇಂದಿನ ಜ್ಞಾನಪೀಠ ವಿಜೇತರು ಶರಣರು ಬರೆದಂಥ ವಚನಗಳನ್ನು ಬರೆಯಲು ಸಾಧ್ಯವಿಲ್ಲ. ಶರಣರು ಕವನ, ಕಥೆ, ಕಾದಂಬರಿಗಳನ್ನು ಬರೆಯಲಿಲ್ಲ ವಚನಗಳನ್ನು ಬರೆದರು. ವಚನಗಳೆಂದರೆ ಆತ್ಮ ಸಾಕ್ಷಿ, ಪರಮಾತ್ಮ ಸಾಕ್ಷಿಯಾಗಿ ಬಂದ ನುಡಿಗಳು. ವಚನ ಸಾಹಿತ್ಯವು ಧರ್ಮಕ್ಕೆ ಚಲನಶೀಲತೆಯನ್ನು ತಂದು ಕೊಟ್ಟಿತು. ಸ್ಥಾವರದ ನಿರಾಕರಣೆ ಜಂಗಮದ ಪ್ರತಿಷ್ಠಾಪನೆ ಗುರುಬಸವಣ್ಣನವರು ಮಾಡಿದ ಭಕ್ತಿ ಕ್ರಾಂತಿಯ ಫಲ. ಯಾವ ದೇಹವನ್ನು ವೈದಿಕರು ನಶ್ವರ, ಮಾಯೆ ಎಂದು ಕರೆದರೋ, ಆ ದೇಹದಲ್ಲಿ ಗುರುಬಸವಣ್ಣನವರು ಇಷ್ಟಲಿಂಗವನ್ನು ಪ್ರತಿಷ್ಠಾಪನೆ ಮಾಡುವುದರ ಮೂಲಕ ದೇಹವನ್ನು ದೇವಾಲಯವನ್ನಾಗಿ ಮಾಡಿದರು. ಇಂದಿಗೂ ಭಕ್ತಿಯನ್ನು ಸ್ವತಂತ್ರಗೊಳಿಸಲಿಕ್ಕಾಗಿಕಿಲ್ಲ. ಭಕ್ತಿಯ ಸ್ವಾತಂತ್ರ ಹರಣವಾಗಿದೆ ದೇವಸ್ಥಾನದಲ್ಲಿ ಪೂಜಾರಿ ಇದ್ದಾಗಲೇ ಪೂಜೆ ಮಾಡಿಸಬೇಕು, ಅವನು ಅಲ್ಲಿ

****

ಕುಳಿತುಕೊಳ್ಳಲಿಕ್ಕೆ ಅವಕಾಶ ಕೊಟ್ಟಷ್ಟು ಕಾಲ ಮಾತ್ರ ಕುಳಿತುಕೊಳ್ಳಬೇಕು. ಅವನು ಅವಕಾಶ ಕೊಟ್ಟಷ್ಟೇ ಸಮಯದಲ್ಲಿ ದೇವತೆಗಳ ವಿಗ್ರಹ ನೋಡಬೇಕು. ಇದರಿಂದ ಭಕ್ತನ ಆತ್ಮದ ಹಸಿವು ಹಿಂಗಲಾರದು. ಅದಕ್ಕಾಗಿಯೇ ಗುರುಬಸವಣ್ಣನವರು ಭಕ್ತಿಯನ್ನು ಖಾಸಗಿತನದಿಂದ ಮುಕ್ತಗೊಳಿಸಿ ಪೂಜಾರಿಯ ಮಧ್ಯಸ್ತಿಕೆಯನ್ನು ತಪ್ಪಿಸಿದರು. ಪೂಜಾರಿಯನ್ನು ದೇವಸ್ಥಾನದಿಂದ ತೆಗೆದುಹಾಕುವುದರ ಮುಖಾಂತರವಲ್ಲ, ಎಲ್ಲರನ್ನೂ ಇಷ್ಟಲಿಂಗವನ್ನು ಪೂಜಿಸುವ ಪೂಜಾರಿಗಳನ್ನಾಗಿ ಮಾಡುವುದರ ಮುಖಾಂತರ,

ತನ್ನಾಶ್ರಯದ ರತಿ ಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ಕೆಮ್ಮನೆ ಉಪಚಾರಕ್ಕೆ ಮಾಡುವರೆಲ್ಲರು
ನಿಮ್ಮನೆತ್ತ ಬಲ್ಲರು ಲಿಂಗದೇವಾ ? (ಬ.ವ.ದೀ.-185)

ತಮ್ಮ ತಮ್ಮ ಆತ್ಮೋದ್ಧಾರ ತಾವು ತಾವೆ ಮಾಡಿಕೊಳ್ಳಬೇಕೆಂದು ತಿಳಿಸಿ ಕರಸ್ಥಲದಲ್ಲಿ ಇಷ್ಟಲಿಂಗವನ್ನು ಕೊಟ್ಟರು. ಇಷ್ಟಲಿಂಗವು ಕೇವಲ ದೇವರ ಕುರುಹು ಆಗಲಿಲ್ಲ, ಅದು ಸಮಾನತೆಯ ಕುರುಹಾಯಿತು.

ಗುರುಬಸವಣ್ಣನವರ ಸಮಗ್ರ ಕ್ರಾಂತಿಯನ್ನು ನೋಡಿ ಅಲ್ಲಮ ಪ್ರಭುದೇವರಿಗೆ ಪರಮಾಶ್ಚರ್ಯವಾಗುತ್ತದೆ.

ಆಯತದಲ್ಲಿ ಪೂರ್ವಾಚಾರಿಯ ಕಂಡೆ
ಸ್ವಾಯತದಲ್ಲಿ ಪೂರ್ವಾಚಾರಿಯ ಕಂಡೆ
ಸನ್ನಿಹಿತದಲ್ಲಿ ಪೂರ್ವಾಚಾರಿಯ ಕಂಡೆ
ಗುಹೇಶ್ವರ ಲಿಂಗದಲ್ಲಿ ಪೂರ್ವಾಚಾರಿ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎಂಬೆ.

ಪೂರ್ವಾಚಾರಿ ಎಂದರೆ ಮೊದಲಿಗ (Pioneer) ಎಂದು ಅರ್ಥ. ಗುರುಬಸವಣ್ಣನವರು ಎಲ್ಲಾ ರಂಗಗಳಲ್ಲಿಯೂ ಮೊದಲಿಗರಾಗಿ ಬದಲಾವಣೆಯನ್ನು ತಂದರು. ಅಲ್ಲಮ ಪ್ರಭುದೇವರು ಪರಮ ವಿರಕ್ತರಾಗಿದ್ದರು. ಅವರು ಗೃಹಸ್ಥರಾದ ಗುರುಬಸವಣ್ಣನವರ ಪಾದಕ್ಕೆ ಶರಣಾರ್ಥಿ ಸಲ್ಲಿಸುತ್ತಾರೆ ಎಂದರೆ ಗುರುಬಸವಣ್ಣನವರ ನಿಲುವು ಎಷ್ಟು ಎತ್ತರ ಇದ್ದಿರಬಹುದು! ಇತಿಹಾಸದಲ್ಲಿ ಪರಮ ವಿರಕ್ತರೊಬ್ಬರು ಪರಮ ಗೃಹಸ್ಥರ ಪಾದಗಳಿಗೆ ಶರಣೆಂದಿರುವುದು ಅಲ್ಲಮ ಪ್ರಭು ಹಾಗೂ ಗುರುಬಸವಣ್ಣನವರ ಸನ್ನಿವೇಶ ಬಿಟ್ಟರೊಬ್ಬರ ಜಗತ್ತಿನ ಮತ್ತೊಂದು ಕಡೆ ಸಿಗಲಿಕ್ಕಿಲ್ಲ.

ಶಿವ ತಾನೀತ ಮರ್ತ್ಯಲೋಕವ ಪಾವನವ ಮಾಡಲು.
ಗುರು ತಾನೀತ ಎನ್ನ ಭವರೋಗವ ಛೇದಿಸಲು,
ಭಕ್ತ ತಾನೀತ ಎನಗೆ ವಿಸ್ತಾರವಾಗಿ.
ಎನಗೆ ಜಂಗಮ ತಾನೀತ ಅನಾದಿ ಸಂಸಿದ್ಧ ಘನ ಮಹಿಮನಾಗಿ,
ಲಿಂಗ ತಾನೀತ ಎನಗೆ ಪ್ರಾಣಲಿಂಗ ತಾನಾಗಿ.
ಎನ್ನ ವಿಸ್ತಾರ ತಾನೀತ ಎನ್ನ ನಿಲುಕಡೆಯು ತಾನಾಗಿ,

ಎನಗೆ ಸರ್ವ ಸ್ವಾಯತ ಮಾಡಿದ ಮಹಾಮು ತಾನೀತ ಕಾಣಾ
ಕಲಿದೇವರ ದೇವಾ ನಿಮ್ಮ ಬಸವಣ್ಣನು.

10,000 ವರ್ಷಗಳ ಹಿಂದೆ ಯೋಗಿ ರಾಜನಾದ ಶಿವನು ಹೇಗೆ ಭಾರತ ದೇಶದಲ್ಲಿ ಭಕ್ತಿ ಪರಂಪರೆಯನ್ನು ಹರಡಿ ಮರ್ತ್ಯಲೋಕವನ್ನು ಪಾವನಗೊಳಿಸಿದ್ದನೋ ಅದೇ ರೀತಿ ಗುರುಬಸವಣ್ಣನವರು ಕೂಡ ಮತ್ತೊಮ್ಮೆ ಇಲ್ಲಿ ಭಕ್ತಿಯ ಬೆಳವಿಗೆಯನ್ನು ದೆಸೆದೆಸೆಗೂ ಪಸರಿಸಿದರು. ಅದಕ್ಕಾಗಿಯೇ ಗುರುಬಸವಣ್ಣನವರನ್ನು ದ್ವಿತೀಯ ಶಂಭು (ಎರಡನೆಯ ಶಿವ) ಎಂದು ಕರೆಯುತ್ತಾರೆ.

ಗುರುವು ಪರಮಾತ್ಮನ ಪ್ರತಿನಿಧಿಯಾಗಿ ಬರುತ್ತಾನೆ. ಹೀಗೆ ಬಂದ ಬಸವಣ್ಣನವರು, ಭಕ್ತನ ಕಷ್ಟ ಸುಖಗಳನ್ನು ವಿಚಾರಿಸಿ, ಅವನ ಕರ್ಮವನ್ನು ಬಿಡಿಸಿ ಭವರೋಗವನ್ನು ಛೇದಿಸಿದರು. 'ಭಕ್ತ ತಾನೀತ ಎನಗೆ ವಿಸ್ತಾರವಾಗಿ' ಎಂದರೆ ಗುರುಬಸವಣ್ಣನವರು ಪರಮಾತ್ಮನಿಗೆ ಪರಮ ಭಕ್ತರಾಗಿ ಉಳಿದೆಲ್ಲ ಭಕ್ತರಿಗೆ ಮಾದರಿ (Model) ಆದರು. ಜಂಗಮ-ಲಿಂಗದ ಸ್ವರೂಪವೇ ಬಸವಣ್ಣನವರು. 'ಎನ್ನ ವಿಸ್ತಾರ ತಾನೀತ ಎನ್ನ ನಿಲುಕಡೆಯು ತಾನಾಗಿ' ಎಂದರೆ, ಗುರುಬಸವಣ್ಣನವರ ಸಾನಿಧ್ಯ ಸಿಗುವುದಕ್ಕಿಂತ ಮುಂಚೆ, ಞಾನು ತುಂಬಾ ಅರಸುತ್ತಿದ್ದೆ, ಹುಡುಕಾಟ ನಿಂತಿರಲಿಲ್ಲ. ಗುರುಬಸವಣ್ಣನವರು ಬಂದು ವಿಸ್ತಾರವಾದ ಪರಮಾತ್ಮನ ನೆಲೆಯನ್ನು ತಿಳಿಸಿರುವುದರಿಂದ ನನ್ನ ಅರಸುವಿಕೆಗೆ ನಿಲುಕಡೆಯಾದರು ಎಂದು ಮಡಿವಾಳ ಮಾಚಿದೇವರು ಗುರುಬಸವಣ್ಣನವರ ನಿಲುವನ್ನು ಕೊಂಡಾಡುತ್ತಾರೆ.

ಗುರುಬಸವಣ್ಣನವರು ಮಂತ್ರ, ಪುರುಷರು, ದೇವರು ಕಲಿಂದೇ ಇರುವ ಅನೇಕ ಗುಣ ನಡತೆಗಳನ್ನು ಗುರುಬಸವಣ್ಣನವರು ನಮಗೆ ಕಲಿಸಿದ್ದಾರೆ. ಅದಕ್ಕಾಗಿ ನಾವು ಅವರನ್ನು ಪೂಜಿಸಬೇಕು.

ಎನ್ನ ಕಾಯ ಬಸವಣ್ಣನ ಪೂಜಿಸಲಿಕ್ಕಾಯಿತು.
ಎನ್ನ ಜೀವ ಬಸವಣ್ಣನ ನೆನೆಯಲಿಕ್ಕಾಯಿತು.
ಎನ್ನ ಶ್ರೋತ್ರ ಬಸವಣ್ಣನ ಚಾರಿತ್ರವ ಕೇಳಲಿಕ್ಕಾಯಿತು.
ಎನ್ನ ಪ್ರಾಣ ಬಸವಣ್ಣನ ಸ್ತುತಿಸಲಿಕ್ಕಾಯಿತು.
ಎನ್ನ ನೇತ್ರ ಬಸವಣ್ಣನ ಸರ್ವಾಂಗವ ನೋಡಲಿಕ್ಕಾಯಿತು.
ಇಂತೆನ್ನ ಪಂಚೇಂದ್ರಿಯಂಗಳು ಕಲಿಗಳಾಗಿ
ಬಸವಣ್ಣನ ಹಿಡಿಯಲಿಕ್ಕಾಯಿತು.
ಬಸವಣ್ಣನ ಅರಿವಿನೊಳಗೆ ನಾನಿದ್ದೆನು,
ಬಸವಣ್ಣನ ಮರಹಿನೊಳಗೆ ನಾನಿದ್ದೆನು ಕಾಣಾ ಕಲಿದೇವರದೇವಾ.

ಗುರುಬಸವಣ್ಣನವರನ್ನು ಪೂಜಿಸಬೇಕೆಂದು ಮಡಿವಾಳ ಮಾಚಿದೇವರು ಅಂದೇ ಹೇಳಿದ್ದಾರೆ. ಗುರುಬಸವಣ್ಣನವರನ್ನು ನೆನೆಯುವದರಿಂದ ಅವರನ್ನು ಸ್ತುತಿಸುವುದರಿಂದ, ಅವರ ಚರಿತ್ರೆ ಕೇಳುವುದರಿಂದ ಭವನಾಶವಾಗುತ್ತದೆ.

ಕಂತುಹರ ಬಸವಣ್ಣ ಚಿಂತಾಯಕ ಬಸವಣ್ಣ
ಮಂತ್ರಸಿದ್ಧನು ಬಸವಣ್ಣನ । ಪಾದಕ್ಕೆ
ಶರಣೆನ್ನಿರೆಲ್ಲ ಸರ್ವಜ್ಞ॥

ಬಸವ ಎಂದೊಮ್ಮೆ ಮನವೊಸೆದು ನೆನೆದಡೆ

ಬಸವ ಅಸುವಿಂಗೆ ಅಸುವಾಗಿ ತೋರ್ಪನೈಸೆ
ಬಸವ ನಾಮವ ಬಿಡದೆ ರಸನೆಯೊಳಾವಾಗ
ಬಸವ ಬಸವ ಎಂಬೆ ಯೋಗಿನಾಥ

ಬಸವ ಎಂದು ಭಕ್ತಿಯಿಂದ ನೆನೆದರೆ, ನಮ್ಮ ಪ್ರಾಣಕ್ಕೆ ಪ್ರಾಣಕೊಟ್ಟು ಗುರುಬಸವಣ್ಣನವರು ನಮ್ಮನ್ನು ರಕ್ಷಿಸುತ್ತಾರೆ ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ.

ಗುರುಬಸವಣ್ಣನವರು ಲಿಂಗೈಕ್ಯರಾದ ಪವಿತ್ರ ದಿನವಾದ ಇಂದು ನಾವು ಅವರ ನೆನಹಿನಲ್ಲಿ, ಅವರ ವಚನಗಳನ್ನು ಓದುವುದರಲ್ಲಿ ದಿನ ಕಳೆಯಬೇಕು. ಹುತ್ತಕ್ಕೆ ಹಾಲನ್ನೆರೆಯುವಂಥ ಮೂಢಾಚರಣೆಗಳನ್ನು ಬಿಟ್ಟು ಬಿಡಬೇಕು. ಎಷ್ಟು ದಿನಾ ಇನ್ನೂ ಹಾಗೇ ಅಜ್ಞಾನದಲ್ಲಿಯೇ ಬದುಕುವುದು. ಹಾವು ಹಾಲು ಕುಡಿಯುವುದೆ ಇಲ್ಲ. ಪಿಂಡಜದಿಂದ ಹುಟ್ಟಿದ ಪ್ರಾಣಿಗಳು ಮಾತ್ರ ಹಾಲು ಕುಡಿಯುತ್ತವೆ. ಅಂಡಜದಿಂದ ಹುಟ್ಟಿದ ಪ್ರಾಣಿಗಳು ಹಾಲು ಕುಡಿಯುವುದಿಲ್ಲ. ಅಂದರೆ ತಾಯಿಯ ಗರ್ಭದಿಂದ ಹುಟ್ಟಿದ ಪ್ರಾಣಿಗಳು ಮಾತ್ರ ಹಾಲು ಕುಡಿಯುತ್ತವೆ. ಮೊಟ್ಟೆಯಿಂದ ಹುಟ್ಟಿರುವ ಪ್ರಾಣಿ, ಪಕ್ಷಿಗಳು ಹಾಲು ಕುಡಿಯುವುದಿಲ್ಲ. ಆಸ್ಪತ್ರೆಯಲ್ಲಿರುವ ರೋಗಿಗಳಿಗೆ, ಬಡಮಕ್ಕಳಿಗೆ ಹಾಲು ಕುಡಿಸಬೇಕು.

ಗುರುಬಸವಣ್ಣನವರು ಲಿಂಗೈಕ್ಯದ ಬಗ್ಗೆ ಕೆಲವರು ವಿಚಿತ್ರವಾಗಿ ಬರೆಯುತ್ತಾರೆ. ಅಂಥವರಿಗೆ ವಚನ ಸಾಹಿತ್ಯದ ಅರಿವು ಇರುವುದಿಲ್ಲ. ಆತ್ಮ ಕಥನದಂತಿರುವ ಗುರುಬಸವಣ್ಣನವರ ವಚನಗಳು ಅವರು ಹೇಗೆ ಲಿಂಗೈಕ್ಯರಾದರು ಎಂಬುವುದನ್ನು ಸ್ಪಷ್ಟಪಡಿಸುತ್ತವೆ. ಗುರುಬಸವಣ್ಣನವರು ಲಿಂಗೈಕ್ಯರಾದ ಸ್ಥಿತಿಯನ್ನು ಮಡಿವಾಳ ಮಾಚಿದೇವರು ಕಣ್ಣಾರೆ ನೋಡಿ ಅನೇಕ ವಚನಗಳನ್ನು ಬರೆದಿದ್ದಾರೆ. ಗುರುಬಸವಣ್ಣನವರು ಲಿಂಗೈಕ್ಯರಾದಾಗ, ನದಿ ಪ್ರವಾಹ ಹೆಚ್ಚಾಗಿರುವುದರಿಂದ ನೀಲಾಂಬಿಕಾ ತಾಯಿಯವರು ಇನ್ನೊಂದು ದಡದಲ್ಲಿ ತಂಗಿದ್ದರು. ಗುರುಬಸವಣ್ಣನವರು ಲಿಂಗೈಕ್ಯರಾದ ಸುದ್ದಿ ಕೇಳಿದಾಗ ಮೊದಲಿಗೆ ಮನಸ್ಸಿಗೆ ಸ್ವಲ್ಪ ಆಘಾತವಾಗಿರಬೇಕು. ಆದರೆ ಜ್ಞಾನಿಗಳು ಆ ರೀತಿ ನೊಂದುಕೊಳ್ಳಬಾರದು ಎಂದು ಅವರು ತಮ್ಮ ಮನಸ್ಸಿಗೆ ಸಮಾಧಾನ ಹೇಳಿಕೊಳ್ಳುತ್ತಾರೆ ಅಂಥ ಅನೇಕ ವಚನಗಳನ್ನು ಬರೆದಿದ್ದಾರೆ.

ನಾನಾರ ಸಾರುವೆನೆಂದು ಚಿಂತಿಸಲೇಕಯ್ಯಾ ಬಸವಾ.
ನಾನಾರ ಹೊಂದುವೆನೆಂದು ಭ್ರಮೆ ಪಡಲೇಕಯ್ಯಾ ಬಸವಾ.
ನಾನಾರ ಇರವನರಿವೆನೆಂದು ಪ್ರಲಾಪಿಸಲೇಕಯ್ಯಾ ಬಸವಾ
ಪರಿಣಾಮ ಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ
ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇಕಯ್ಯಾ ಬಸವಾ

"ನಾನೀಗ ಯಾರ ಹತ್ತಿರ ಹೋಗಲಿ? ಯಾರನ್ನು ನನ್ನವರೆನ್ನಲಿ ? ಎಂದು ಕಳವಳ ಪಡಬೇಡ, ಗುರುಬಸವಣ್ಣನವರು ನಿನ್ನ ಕರಸ್ಥಲದಲ್ಲಿಯೇ ಇದ್ದಾರೆ" ಎಂದು ತಮ್ಮ ಮನಸ್ಸಿಗೆ ಸಮಾಧಾನ ಹೇಳಿಕೊಳ್ಳುತ್ತಿದ್ದಾರೆ.

"ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣಾ" ಆತ್ಮಕ್ಕೆ ಹೊದ್ದಿದ್ದ ದೇಹವೆಂಬ ಸೀರೆಯನ್ನು ಬಿಟ್ಟು ಹೋಗಿದ್ದಾರೆ. "ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣಾ" ತಮ್ಮ ಮಸ್ತಕದ ಮಹಾಜ್ಞಾನವೆಂಬ ಮುಡಿಯನ್ನು ವಚನಗಳ ರೂಪದಲ್ಲಿ ಕೊಟ್ಟು ಗುರುಬಸವಣ್ಣನವರು ಹೋಗಿದ್ದಾರೆ. ಈ ವಚನವನ್ನು ಮಡಿವಾಳ ಮಾಚಿದೇವರು ಗುರುಬಸವಣ್ಣನವರು ಲಿಂಗೈಕ್ಯರಾದ ಮೇಲೆ ಬರೆದ ವಚನ. "ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣಾ" ಎನ್ನುತ್ತಾರೆ

****

ಗುರುಬಸವಣ್ಣನವರ ಆತ್ಮಜ್ಯೋತಿಯ ಬೆಳಗು, ಪರಮಾತ್ಮ ಜ್ಯೋತಿಯ ಮಹಾ ಬೆಳಗಿನಲ್ಲಿ ಸಮರಸಗೊಳ್ಳುವ ಕ್ಷಣಗಳನ್ನು ಮಡಿವಾಳ ಮಾಚಿದೇವರು ನೋಡಿದ್ದಾರೆ ಎಂದು ನನಗನಿಸುತ್ತದೆ. ಮಡಿವಾಳ ಮಾಚಿದೇವರು ವಚನ ಸಾಹಿತ್ಯವನ್ನು ಸುರಕ್ಷಿತವಾಗಿ ಬಚ್ಚಿಟ್ಟು ಶರಣರಿಗಾದ ವಿಜಯವನ್ನು ಗುರುಬಸವಣ್ಣನವರಿಗೆ ತಿಳಿಸಲು, ಕೂಡಲ ಸಂಗಮಕ್ಕೆ ಬರುತ್ತಾರೆ. ಅಲ್ಲಿಗಾಗಲೇ ಗುರುಬಸವಣ್ಣನವರು, ದೇಹದಿಂದ ಆತ್ಮವನ್ನು ಭೇದಿಸಲು ಇಷ್ಟಲಿಂಗಯೋಗದಲ್ಲಿ ತಲ್ಲೀನರಾಗಿದ್ದರು. ಅದಕ್ಕಾಗಿ ಮಡಿವಾಳ ಮಾಚಿದೇವರಿಗೆ ಕೊನೆಯ ಕ್ಷಣದಲ್ಲಿ ಗುರುಬಸವಣ್ಣನವರೊಂದಿಗೆ ಮಾತನಾಡಲಿಕ್ಕೆ ಆಗಿಲ್ಲ. ಅದಕ್ಕೆ ಅವರು ತುಂಬಾ ದುಃಖದಿಂದ ಪ್ರಲಾಪಿಸಿದ್ದಾರೆ. ಇಂಥ ಅನೇಕ ವಚನಗಳನ್ನು ಮಡಿವಾಳ ಮಾಚಿದೇವರು ಬರೆದಿದ್ದಾರೆ.

ಎಲ್ಲಕ್ಕೂ ಮಿಗಿಲಾಗಿ ಆತ್ಮ ಕಥನದಂತಿರುವ ಗುರುಬಸವಣ್ಣನವರ ವಚನಗಳು ಅವರು ಹೇಗೆ ಲಿಂಗೈಕ್ಯರಾದರು ಎನ್ನುವುದನ್ನು ತಿಳಿಸಿಕೊಡುತ್ತವೆ. ಬಸವ ಕಲ್ಯಾಣದಿಂದ ಹೋದ ನಂತರ ಕೂಡಲ ಸಂಗಮದಲ್ಲಿ ಸಂಪೂರ್ಣವಾಗಿ ಅಂತರ್ಮುಖಿಗಳಾಗಿ, ಇಷ್ಟಲಿಂಗ ಯೋಗದಲ್ಲಿ ತಲ್ಲೀನರಾಗುತ್ತಾರೆ. ಭಾವಲಿಂಗೈಕ್ಯ ಸ್ಥಿತಿಯ ಅನೇಕ ವಚನಗಳನ್ನು ಬರೆದಿದ್ದಾರೆ. ಇದಾದ ಮೇಲೆ ಕಾಯಲಿಂಗೈಕ್ಯವಾಗುತ್ತಾರೆ. ಅವರ ಕೊನೆಯ ವಚನವೇನೋ ಎಂಬಂತಿದೆ ಈ ವಚನ.

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು.
ಆಚಾರವೆಂಬ ಕಾಯಾಯಿತ್ತು.
ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ
ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ.

ಪರಮಾತ್ಮನ ಭಕ್ತಿ ಮಾಡುತ್ತಲೇ ಇರುವಾಗ ಗುರುಬಸಣ್ಣನವರಿಗೆ ಪರಮಾತ್ಮನ ಅನುಗ್ರಹವಾಗಿ ಅವರು ಅವನ ಪ್ರತಿನಿಧಿಯಾಗಿ, ಮರ್ತ್ಯಲೋಕದ ಉದ್ಧಾರಗೈಯಲು ಗುರುವಾದರು. (ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿತು.) ಅವರಲ್ಲಿ ಲಿಂಗವೆಂಬ ಎಲೆ ಚಿಗುರಿತು. ವಿಚಾರ (ವಚನ ಸಾಹಿತ್ಯ)ವೆಂಬ ಹೂವಾಗಿ, ಅದು ಸುತ್ತಲೂ ತನ್ನ ಪರಿಮಳವನ್ನು ನೀಡಿತು. ನಂತರ ಎಲ್ಲಾ ವಿಚಾರಗಳು ಅಲ್ಲಿ ಆಚರಣೆಗೆ (ಕಾಯಿಯಾದವು) ಬಂದವು. ಇದಾದ ಮೇಲೆ ಗುರುಬಸವಣ್ಣನವರ ಮನಸ್ಸು ನಿಷ್ಪತ್ತಿಯ ಹಣ್ಣಾಯಿತ್ತು. ಅವರಿಗೆ ಮರ್ತ್ಯಲೋಕದೊಂದಿಗಿನ ಸಂಬಂಧ ಕಳಚಿಕೊಳ್ಳಬೇಕೆನಿಸಿ ದೇಹದಿಂದ ಆತ್ಮ ಬೇರ್ಪಡಿಸುತ್ತಿರುವಾಗಲೇ ಪರಮಾತ್ಮ ಚೈತನ್ಯ ಬಂದು ಗುರುಬಸವಣ್ಣನವರ ಆತ್ಮಚೈತನ್ಯವನ್ನು ಅಪ್ಪಿಕೊಂಡಿತು. ಶಾರೀರಿಕವಾಗಿ ಗುರುಬಸವಣ್ಣನವರೂ ಅಗಲಿದ್ದರೂ, ವಚನಗಳ ರೂಪದಲ್ಲಿ ಎಂದೆಂದಿಗೂ ನಮ್ಮ ಜೊತೆಯಲ್ಲಿಯೇ ಇದ್ದಾರೆ. ಅದಕ್ಕಾಗಿ ವಚನ ಸಾಹಿತ್ಯವನ್ನು ಓದುತ್ತ ಇದನ್ನು ಮುಂಬರುವ ನಮ್ಮ ಮಕ್ಕಳಿಗೂ ಬಳುವಳಿಯಾಗಿ ನೀಡುತ್ತ ಬಸವ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗೋಣ. ಗುರುಬಸವಣ್ಣನವರ ಲಿಂಗೈಕ್ಯ ದಿನವಾದ ಶುಭದಿನದಂದು ಗುರುಬಸವಣ್ಣನವರಿಗೆ ಅನಂತ ಶರಣು ಶರಣಾರ್ಥಿಗಳನ್ನು ಸಲ್ಲಿಸೋಣ.



ಪುಣೆ ನಗರದಲ್ಲಿ ನಡೆದ 10ನೆಯ ಲಿಂಗಾಯತ ಧರ್ಮ ಸಮ್ಮೇಳನ ಕಾರ್ಯಕ್ರಮದ ಛಾಯಾಚಿತ್ರಗಳು







CPMG/KA/BGW-50/2009-2011, RNI 19980/70,
POSTED AT MBC BANGALORE GPO ON 3,10,20 OF EVERY MONTH
LICENCED TO POST WITHOUT PRE PAYMENT WPP-17

